ಶಿಕ್ಷಣದಿಂದ ಶ್ರೇಷ್ಠತೆ

**ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜು (ಸ್ವಾಯತ್ತ)**
ಜಯಲಕ್ಷ್ಮೀಪುರಂ, ಮೈಸೂರು–12

ಶ್ರೇಷ್ಠತೆಯ ಸಾಮರ್ಥ್ಯವುಳ್ಳ ಕಾಲೇಜು

**ಇತಿಹಾಸ ವಿಭಾಗ**
**Dept. of History**

**ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಯೋಜನೆಗೊಂಡು, ನ್ಯಾಕ್‌ನಿಂದ 'ಎ' ಮಾನ್ಯತೆ ಪಡೆದಿದೆ.**




ಸಂಚಿಕೆ: 31 ಜನವರಿ 2022 | ಪ್ರಧಾನ ಸಂಪಾದಕರು: ಡಾ. ಬಿ.ಆರ್. ಜಯಕುಮಾರಿ, ಪ್ರಾಂಶುಪಾಲರು | www.mahajanafgc.com | ಸಂಪಾದಕರು: ಡಾ.ಶ್ರೀಧರ ಹೆಚ್, ಇತಿಹಾಸ ವಿಭಾಗ | ಪುಟಗಳು: 08

**ಸಂಪಾದಕೀಯ**

# ಪ್ರಾಚೀನ ಭಾರತದ ವಿದ್ಯಾಕೇಂದ್ರ ನಲಂದಾ



ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಸರಕಾರವು ಈ ಸಾಲಿನಿಂದ ಅನುಷ್ಠಾನ ಮಾಡಲು ಸಕಲ ಸಿದ್ಧತೆಗಳನ್ನು ನಡೆಸುತ್ತಿದೆ. ರಾಷ್ಟ್ರೀಯ ಶಿಕ್ಷಣ ನೀತಿಯ ಅನುಷ್ಠಾನದ ಈ ಘಟ್ಟದಲ್ಲಿ ಮತ್ತೆ ಮತ್ತೆ ನೆನಪಾಗುತ್ತಿರುವುದು ಭಾರತದ ಪ್ರಾಚೀನ ವಿದ್ಯಾಕೇಂದ್ರವಾದ ನಲಂದಾ ವಿಶ್ವವಿದ್ಯಾನಿಲಯದ ಗತವೈಭವ.

ಇದು ಕ್ರಿ.ಶ 427 ರಿಂದ 1197ರ ತನಕ ಜಾಗತಿಕ ಮನ್ನಣೆ ಪಡೆದ ವಿದ್ಯಾಲಯ. ಆ ಕಾಲದಲ್ಲಿ ನಲಂದಾದ ಕೀರ್ತಿಗೆ ಮಾರುಹೋಗಿ ಜಗತ್ತಿನ ಬೇರೆ ಬೇರೆ ಭಾಗಗಳಿಂದ ಜ್ಞಾನದಾಹಿಗಳಾಗಿ ಸಾವಿರಾರು ಜನರು ಭಾರತದತ್ತ ಮುಖ ಮಾಡುತ್ತಿದ್ದರು. ನಲಂದಾದಲ್ಲಿ ಓದಿದವನಿಗೆ ಜ್ಞಾನಕ್ಷೇತ್ರದಲ್ಲಿ ಜಾಗತಿಕ ಮನ್ನಣೆ. ಹಾಗೆ ಓದುವುದೇ ಅವರಿಗೆ ಒಂದು ಹೆಮ್ಮೆಯ ಸಂಗತಿ. ಆದರೆ ಅವುಗಳನ್ನೆಲ್ಲ ಕಣ್ಣಾರೆ ಕಾಣದ ನಾವು ಅದರ ವೈಭವವನ್ನು ಬೇರೆ ಮೂಲಗಳಿಂದ ಅರಿತುಕೊಳ್ಳಬೇಕಾಗಿದೆ. ಅಂಥ ಮೂಲಗಳಲ್ಲಿ ಒಂದು, ಆ ಕಾಲದಲ್ಲಿ ಭಾರತಕ್ಕೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರ ಪ್ರವಾಸಿ ಕಥನ. ಪ್ರತ್ಯಕ್ಷವಾಗಿ ನಲಂದಾವನ್ನು ಕಂಡು, ಅಲ್ಲಿಯೇ ವಿದ್ಯಾಭ್ಯಾಸ ಮಾಡಿ ಅಲ್ಲಿನ ತಮ್ಮ ಅನುಭವಗಳನ್ನು ಪ್ರವಾಸಿ ಕಥನಗಳಲ್ಲಿ ದಾಖಲಿಸಿದ್ದಾರೆ. ಅದರಲ್ಲೂ ಚೀನಾದ ಹುಯೆನ್–ತ್ಸಾಂಗ್ ಪ್ರಮುಖನಾಗುತ್ತಾನೆ. ಆತನು ಭಾರತಕ್ಕೆ ಬಂದು ಸಂಸ್ಕೃತವನ್ನು ಕಲಿತು ನಲಂದಾದಲ್ಲಿ ಯೋಗವಿದ್ಯೆಯನ್ನು ಅಭ್ಯಸಿಸಿದನು. ಕ್ರಿ. ಶ. 630 ರಿಂದ 644ರ ತನಕ ಅಂದರೆ ಸುಮಾರು 14 ವರ್ಷಗಳ ಕಾಲ ಭಾರತದಲ್ಲಿದ್ದು, ಅಧ್ಯಯನ ಕೈಗೊಂಡನು. ಭಾರತದಿಂದ ಮರಳುವಾಗ ಆತನ ಬಳಿ 657 ಪುಸ್ತಕಗಳಿದ್ದವು.

ನಲಂದಾ ಎಂದರೆ ನೀಡಿದಷ್ಟೂ ತೃಪ್ತಿ ಇಲ್ಲ, ಜ್ಞಾನಕ್ಕೆ ಮಿತಿಯಿಲ್ಲ ಎಂಬಿತ್ಯಾದಿ ಅರ್ಥವೈಭವಗಳನ್ನು ವಿದ್ವಾಂಸರು ನೀಡಿದ್ದಾರೆ. ವಸತಿ ಸೌಕರ್ಯಗಳನ್ನು ಕಲ್ಪಿಸಿ ಬೋಧಿಸಿದ ಪ್ರಪಂಚದ ಮೊದಲ ವಿದ್ಯಾಕೇಂದ್ರ ಎಂಬ ಹೆಗ್ಗಳಿಕೆಗೂ ಇದು ಪಾತ್ರವಾಗಿದೆ. ಮೂಲತ: ಬೌದ್ಧ ವಿಹಾರದ ರೂಪದಲ್ಲಿದ್ದರೂ ವೇದ ಮೊದಲಾದ ಎಲ್ಲ ಜ್ಞಾನ ಶಾಖೆಗಳನ್ನೂ ಇಲ್ಲಿ ಬೋಧಿಲಾಗುತ್ತಿತ್ತು.

**ಪ್ರಾಕೃತಿಕ ಸೊಬಗು :**

ವಿದ್ಯಾಕೇಂದ್ರಗಳು ನಿರ್ಮಲವಾದ ಪ್ರದೇಶದಲ್ಲಿ ವಿಶಾಲ ಸ್ಥಳದಲ್ಲಿರಬೇಕು. ಪ್ರಕೃತಿಯ ಸುಂದರ ದೃಶ್ಯಗಳ ನಡುವೆ ಅಧ್ಯಯನ ನಡೆಯಬೇಕು. ಇದು ನಮ್ಮ ಹಿರಿಯರ ಕಲ್ಪನೆ. ನಲಂದಾವನ್ನು ಇದೇ ಹಿನ್ನೆಲೆಯಲ್ಲಿ ನಿರ್ಮಿಸಲಾಗಿದೆ. ಇದು ಸುಮಾರು 14 ಎಕರೆ ವಿಸ್ತೀರ್ಣ ಸ್ಥಳದಲ್ಲಿ ವ್ಯಾಪಿಸಿತ್ತು. ಸುತ್ತಲೂ ಇಟ್ಟಿಗೆಗಳ ಗೋಡೆ. ಹೆಬ್ಬಾಗಿಲಿನಿಂದ ಪ್ರವೇಶಿಸಿದರೆ ಮಹಾ ವಿದ್ಯಾಮಂದಿರ. ಸುತ್ತ ಎಂಟು ಹಜಾರಗಳು. ಈ ವಿದ್ಯಾಕೇಂದ್ರದ ಕಿಟಕಿಗಳು ಹೊರಗಿನ ಪ್ರಾಕೃತಿಕ ಸೌಂದರ್ಯವನ್ನು ಸವಿಯಲು ಪೂರಕವಾಗಿದ್ದವು. ಕಿಟಕಿಗಳಿಂದ ಕಂಡರೆ ಎತ್ತರದ ಆಗಸ. ಆಗಸದಲ್ಲಿ ವಿವಿಧಾಕಾರದಲ್ಲಿ ಬಿತ್ತರಿಸಿದ ಮುದ ನೀಡುವ ಎತ್ತರದ ಮೋಡಗಳು. ಇದರೊಂದಿಗೆ ಮನಸ್ಸನ್ನು ರಂಜಿಸುವ ಸೂರ್ಯ ಹಾಗೂ ಚಂದ್ರರ ಉದಯಾಸ್ತಮಾನಗಳ ಸುಂದರ ದೃಶ್ಯಗಳು. ಹೊರಗೆ ತಿಳಿಯಾದ ತಿಳಿಗೊಳಗಳು. ಕೊಳಗಳಲ್ಲಿ ತಾವರೆಯ ಹೂಗಳು. ಕೆಲವು ಕೊಳಗಳ ಮೇಲೆ ಮಾವಿನ ಮರಗಳ ನೆರಳು. ಒಟ್ಟಿನಲ್ಲಿ ಪ್ರಾಕೃತಿಕವಾಗಿ ರಮ್ಯಸ್ಥಳ. ಜ್ಞಾನಾಸಕ್ತರ ಮನಸ್ಸಿನ ಕೇಂದ್ರೀಕರಣ, ಅಧ್ಯಯನ, ಅಧ್ಯಾಪನ ಹಾಗೂ ಧ್ಯಾನಕ್ಕೆ ಪೂರಕವಾದ ಪರಿಸರ.

**ಪು.ತಿ.ನೋ.**



**ವಿದ್ಯಾವೈಭವ :**

ನಲಂದಾದಲ್ಲಿ ಓದಲು ದೇಶ ವಿದೇಶದ ಬೇರೆ ಬೇರೆ ಭಾಗಗಳಿಂದ ನೂರಾರು ಆಸಕ್ತರು ಬರುತ್ತಿದ್ದರು. ಅನೇಕ ಜಿಜ್ಞಾಸುಗಳು ಕೆಲವು ವಿಷಯಗಳ ಚರ್ಚೆಗೂ ಆಗಮಿಸುತ್ತಿದ್ದರು. ಹಾಗೆ ಬರುವವರು ಒಳಪ್ರವೇಶಿಸುವ ಮುನ್ನ ಅಲ್ಲಿ ಪ್ರಶ್ನಿಸುವ ದ್ವಾರಪಾಲಕನ ಪ್ರಶ್ನೆಗೆ ಮೊದಲು ಉತ್ತರಿಸಬೇಕಾಗಿತ್ತು. ಹಾಗೆ ಉತ್ತರಿಸುವುದೂ ಸುಲಭವಾಗಿರಲಿಲ್ಲ. ಅಂತೂ 10 ಜನ ಬಂದರೆ ಬೆರಳೆಣಿಕೆಯಷ್ಟು ಮಂದಿ ಒಳಪ್ರವೇಶಿಸಲು ಅರ್ಹರಾಗುತ್ತಿದ್ದರಂತೆ. ಗುರು ಹಾಗೂ ಶಿಷ್ಯರ ನಡುವೆ ಸತತ ಸಂವಾದ ನಡೆಯುತ್ತಿತ್ತು. ಹುಯೆನ್‌ತ್ಸಾಂಗ್ ಕೊಡುವ ಮಾಹಿತಿಯ ಪ್ರಕಾರ ದಿನದ 24 ಗಂಟೆಯೂ ಅವರಿಗೆ ಕೆಲವೊಮ್ಮೆ ಕಡಿಮೆಯಾಗುತ್ತಿತ್ತಂತೆ. ಅಲ್ಲಿರುವ ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ಸಂಖ್ಯೆಯ ಕುರಿತೂ ವಿವರಗಳು ಲಭಿಸುತ್ತವೆ. ಒಂದು ಅಂಕಿಅಂಶದ ಪ್ರಕಾರ 10 ಸಾವಿರ ವಿದ್ಯಾರ್ಥಿಗಳು, 2,000 ಅಧ್ಯಾಪಕರಿದ್ದರಂತೆ. ನಲಂದಾದ ವಿಶೇಷ ಆಕರ್ಷಣೆ ಅತಿಥಿ ಸತ್ಕಾರ. ಹುಯೆನ್‌ತ್ಸಾಂಗ್ ಇದನ್ನು ಶ್ಲಾಘಿಸಿದ್ದಾನೆ. ಅವನೇ ಹೇಳಿದ ಮಾತುಗಳನ್ನು ಪ್ರವಾಸಿ ಕಂಡ ಇಂಡಿಯಾ ಸಂಪುಟದಲ್ಲಿ ಡಾ॥ ನಾಗೇಗೌಡ ಅವರು ದಾಖಲಿಸಿದ್ದಾರೆ. ನಲಂದಾ ಎಂದರೂ ಒಂದೇ, ತಡೆಯಿಲ್ಲದ ಅತಿಥಿ ಸತ್ಕಾರ ಎಂದರೂ ಒಂದೇ. ನಲಂದಾದ ಗ್ರಂಥಾಲಯದ ಪುಸ್ತಕಗಳ ವೈಭವವೂ ಅದ್ಭುತವಾಗಿತ್ತು. ಒಂಬತ್ತು ಅಂತಸ್ತುಗಳ ಕಟ್ಟಡದ ಗ್ರಂಥಾಲಯ. ಅದರಲ್ಲಿ ಸುಮಾರು 5 ಲಕ್ಷ ಪುಸ್ತಕಗಳು. ಜ್ಞಾನಾಸಕ್ತರ ವಾಸ್ತವ್ಯಕ್ಕಾಗಿ ಸುಮಾರು ನಾಲ್ಕು ಅಂತಸ್ತಿನ ಮನೆಗಳು.

**ವಿದ್ಯಾ ವಿಷಯ ಮತ್ತು ಗುರುಗಳು**

ನಲಂದಾದಲ್ಲಿ ಆಸಕ್ತರಿಗೆ ಅನುಕೂಲವಾದ ವಿಷಯಗಳನ್ನು ಆಯ್ದುಕೊಂಡು ಕಲಿಯುವ ಅವಕಾಶವಿತ್ತು. ಎಲ್ಲ ವಿಷಯಗಳನ್ನು ಬೋಧಿಸಲು ಅರ್ಹರಾದ ಪಂಡಿತರಿದ್ದರು. ಖಗೋಳ, ಗಣಿತ, ಆಯುರ್ವೇದ, ವೇದವಿಚಾರ, ಜ್ಯೋತಿಷ್ಯ, ಯೋಗ, ಸಾಂಖ್ಯ, ಬೌದ್ಧ ಸಾಹಿತ್ಯ, ತರ್ಕಶಾಸ್ತ್ರ, ವ್ಯಾಕರಣ ವಿಚಾರ ಹೀಗೆ ಹತ್ತು ಹಲವು ವಿಚಾರಗಳಲ್ಲಿ ಕಲಿಕೆ ಸಾಗುತ್ತಿತ್ತು. ಹುಯೆನ್‌ತ್ಸಾಂಗ್ ಹೇತುವಿದ್ಯಾ, ಶಬ್ದವಿದ್ಯಾ, ಚಿಕಿತ್ಸಾವಿದ್ಯಾ ಮೊದಲಾದ ಹೆಸರುಗಳಿಂದ ಕರೆದಿರುತ್ತಾನೆ. ಇಲ್ಲಿ ಕಲಿಸುವ ಕೆಲವು ಗ್ರಂಥಗಳ ವಿಚಾರವನ್ನೂ ಇನ್ನೋರ್ವ ಪ್ರವಾಸಿ ಇ–ತ್ಸಿಂಗ್ ಪ್ರಸ್ತಾಪಿಸಿದ್ದಾನೆ. ಪತಂಜಲಿ ರಚಿತ ವೃತ್ತಿಸೂತ್ರ ಅಥವಾ ಕೂರ್ಣಿ. ಇದನ್ನು ಕಲಿಯಲು ಮೂರು ವರ್ಷಗಳು ಬೇಕು. 'ಭತೃಹರಿಶಾಸ್ತ್ರ' ಎಂಬ ಇನ್ನೊಂದು ಗ್ರಂಥವು ಕೂರ್ಣಿಯ ಮೇಲೆ ಬರೆದ ಟೀಕಾ ಗ್ರಂಥ. ಇದರೊಂದಿಗೆ ನಾಲ್ಕು ವೇದಗಳು. ಹೀಗೆ ಹಲವು ಗ್ರಂಥಗಳ ಅಧ್ಯಯನಕ್ಕೆ ಪೂರಕವಾದ ಪರಿಸರವಿತ್ತು.ಇಲ್ಲಿ ಬೋಧಿಸುತ್ತಿದ್ದ ಗುರುಗಳ ಹೆಸರುಗಳನ್ನೂ ಪ್ರವಾಸಿಗರು ನೀಡುತ್ತಾರೆ. ನಾಗಾರ್ಜುನ, ಈತನ ಶಿಷ್ಯ ಆರ್ಯದೇವ, ಶಿಲಾಭದ್ರ, ಬುದ್ಧಭದ್ರ, ಧರ್ಮಪಾಲ, ಚಂದ್ರಪಾಲ, ಗುಣಮತಿ, ಸ್ಥಿರಮತಿ ಮೊದಲಾದ ಹೆಸರಾಂತ ಗುರುಗಳು. ವಿದ್ಯಾಕೇಂದ್ರದ ಪರಿಸರದಲ್ಲಿ ದೇವಸ್ಥಾನವಿದ್ದು, ಅಲ್ಲಿ ಪ್ರತಿನಿತ್ಯ ಪ್ರವಚನ ನಡೆಯುತ್ತಿತ್ತು. ಪ್ರತಿನಿತ್ಯ ಗುರು–ಶಿಷ್ಯರು ತಪ್ಪದೇ ಹಾಜರಾಗುತ್ತಿದ್ದರು.

**ಗುರು ಹಾಗೂ ಶಿಷ್ಯರು**

ನಲಂದಾದಲ್ಲಿ ಹಲವು ನಿಯಮಗಳಿದ್ದವು. ಅವುಗಳನ್ನು ಯಾರೂ ಮೀರುವಂತಿರಲಿಲ್ಲ. ಇಲ್ಲಿರುವ ಈ ನಿಯಮಗಳು ಮತ್ತು ಅವುಗಳ ಪಾಲನೆಯ ಶಿಸ್ತನ್ನು ಬೇರೆಲ್ಲೂ ಕಾಣಲು ಸಾಧ್ಯವಿಲ್ಲ ಎಂದು ಹುಯೆನ್‌ತ್ಸಾಂಗ್ ಹೇಳುತ್ತಾನೆ. ನಿಯಮಗಳನ್ನು ಮೀರಿದ ಪ್ರಕರಣಗಳೇ ಇಲ್ಲವಂತೆ. ವಿದ್ಯಾಕೇಂದ್ರದ ಪರಿಸರದಲ್ಲಿ 10 ತಿಳಿಗೊಳಗಳು. ಅಲ್ಲಿನ ಜ್ಞಾನಾಸಕ್ತರ ಸ್ನಾನಕ್ಕೆ ಮೀಸಲು. ಬೆಳಗ್ಗೆ ಗಂಟೆಯ ನಾದ. ಆ ಹೊತ್ತಿಗೆ ಎಲ್ಲರೂ ಎದ್ದು ಸ್ನಾನ ಮಾಡುತ್ತಾರೆ. ಗುರುಗಳ ಶುಶ್ರೂಷೆಗೂ ಆದ್ಯತೆ. ರಾತ್ರಿ ಮಲಗುವ ಮುನ್ನ ಹಾಗೂ ಬೆಳಗ್ಗೆ ಎದ್ದಕೂಡಲೇ ಗುರುಸೇವೆಯನ್ನು ಮಾಡುತ್ತಾರೆ. ಶಿಷ್ಯರನ್ನು ಗುರುಗಳು ತೀರಾ ಹತ್ತಿರದಿಂದ ಗಮನಿಸುತ್ತಾರೆ. ಅಷ್ಟು ಆತ್ಮೀಯತೆ. ಶಿಷ್ಯರು ಎಡವಿದಾಗಲೆಲ್ಲ ಗುರುವು ತಪ್ಪನ್ನು ತೋರಿಸುತ್ತಾನೆ. ಅದನ್ನು ತಿದ್ದಿ ಹೇಳುತ್ತಾನೆ. ವಿದ್ಯೆಯೊಂದಿಗೆ ಜೀವನಮೌಲ್ಯವಾದ ಸನ್ನಡತೆಗಳ ಬೆಳವಣಿಗೆಗೂ ಅಷ್ಟೇ ಮಹತ್ವವಿತ್ತು.

**ಆದಾಯದ ಮೂಲ :**

ನಲಂದಾದ ಶೈಕ್ಷಣಿಕ ಚಟುವಟಿಕೆಗಳ ವೆಚ್ಚಕ್ಕೆ ರಾಜನು ಸಾಕಷ್ಟು ವ್ಯವಸ್ಥೆ ಕಲ್ಪಿಸಿದ್ದನು. ಸುತ್ತಲಿನ ನೂರು ಗ್ರಾಮಗಳ ಆದಾಯವನ್ನು ಇದರ ಚಟುವಟಿಕೆಗಳಿಗೆ ಮೀಸಲಿಡಲಾಗಿತ್ತು. ಈ ಗ್ರಾಮಗಳಲ್ಲಿರುವ 200 ಗೃಹಸ್ಥರು ಪ್ರತಿದಿನವೂ ಅಕ್ಕಿ, ಹಾಲು, ಬೆಣ್ಣೆಗಳನ್ನು ಒದಗಿಸುತ್ತಿದ್ದರು. ಹುಯೆನ್‌ತ್ಸಾಂಗ್ ಹೇಳುವಂತೆ ಜ್ಞಾನಾಸಕ್ತರ ಮೂಲ ಆವಶ್ಯಕತೆಗಳಾದ ಅನ್ನ, ವಸ್ತ್ರ, ಹಾಸಿಗೆ, ಔಷಧಗಳಿಗೆ ಯಾವುದೇ ಕೊರತೆಯಾಗದಂತೆ ನೋಡಿಕೊಳ್ಳಲಾಗುತ್ತಿತ್ತು.

**ಇಂದು ಕೇವಲ ನೆನಪು ಮಾತ್ರ :**

ಜಗದ್ವಿಖ್ಯಾತವಾದ ನಲಂದಾ ತನ್ನ ವೈಭವಗಳನ್ನು ಬಹಳ ಕಾಲ ಉಳಿಸಿಕೊಳ್ಳಲಿಲ್ಲ. ಭಾರತದ ದೇವಾಲಯಗಳಂತೆ ನಲಂದಾವೂ ದಾಳಿಗೊಳಗಾಯಿತು. ನಲಂದಾದ ಶ್ರೀಮಂತ ಸಂಸ್ಕೃತಿಗೆ ಕಿಚ್ಚಿಡಲಾಯಿತು. ಈ ಬೆಂಕಿ ಮೂರು ತಿಂಗಳು ಉರಿಯುತ್ತಿತ್ತು ಎಂಬ ಐತಿಹ್ಯವೂ ಈ ಘಟನೆಯ ಸುತ್ತ ಬೆಳೆದು ಬಂದಿದೆ. ಬಹುಶಃ ಅಷ್ಟು ಶ್ರೀಮಂತ ಗ್ರಂಥಾಲಯವನ್ನು ಸುಡಲು ಕಿಚ್ಚಿಗೂ ಕಷ್ಟವಾಗಿರಬೇಕು. ಇಂದು ನಲಂದಾ ಕೇವಲ ನೆನಪು ಮಾತ್ರ. ಇದೇ ಮಾದರಿಯ ವಿದ್ಯಾಕೇಂದ್ರ ಮತ್ತೆ ತಲೆ ಎತ್ತಲಿ ಎಂಬ ಆಶಯ ಭಾರತೀಯರದ್ದು. ಅದು ಸಾಕಾರವಾಗಲಿ.

**– ಡಾ. ಶ್ರೀಧರ ಹೆಚ್.**
ಮುಖ್ಯಸ್ಥರು, ಇತಿಹಾಸ ವಿಭಾಗ



## ಸಾಮಾಜಿಕ ಸಮಾನತೆಯ ದನಿಯಾಗಿ – ಬಾಬುಜಗಜೀವನರಾಮ್



1976 ರಲ್ಲಿ ಭಾರತ ಕಠಿಣ ಆಹಾರ ಸಮಸ್ಯೆ ಎದುರಿಸುತ್ತಿತ್ತು. ಆಗ ಜಗಜೀವನರಾಮ್ ಕೃಷಿ ಮತ್ತು ಆಹಾರ ಖಾತೆಗಳನ್ನು ವಹಿಸಿಕೊಂಡು, ಸಮರ್ಥವಾಗಿ ನಿಭಾಯಿಸಿದರು. ದೇಶದಲ್ಲಿ ಹಸಿರು ಕ್ರಾಂತಿಗೆ ಅವರು ನಾಂದಿ ಹಾಡಿದರು. ಕೃಷಿ ಖಾತೆಯನ್ನು ವಹಿಸಿಕೊಂಡ ತಕ್ಷಣವೇ ಅವರು ರಸಗೊಬ್ಬರಗಳ ಬೆಲೆ ಇಳಿಸಿದರು. ಕೃಷಿ ಉಪಕರಣಗಳಿಗೆ ವಿಧಿಸಿದ್ದ ತೆರಿಗೆ ಕಡಿತಗೊಳಿಸಿದರು. ರೈತರಿಗೆ ಉತ್ತಮ ಮಟ್ಟದ ಬೀಜಗಳು ಸರಬರಾಜಾಗುವಂತೆ ನೋಡಿಕೊಂಡರು. ಇದರಿಂದ ಅವರನ್ನು "ಹಸಿರು ಕ್ರಾಂತಿಯ ಹರಿಕಾರ" ಎಂದು ಪ್ರಶಂಸಿಸಲಾಯಿತು.

ಬಾಬೂ ಜಗಜೀವನರಾಮ್ ಅವರು ಭಾರತದ ಸ್ವಾತಂತ್ರ್ಯ ಹೋರಾಟಗಾರರಾಗಿ, ಸಮಾಜ ಸುಧಾರಕರಾಗಿ, ದಲಿತ ಸಮುದಾಯದ ಸಶಕ್ತ ದನಿಯಾಗಿ ನಾಡಿಗೆ ಸಲ್ಲಿಸಿರುವ ಸೇವೆ ಅನುಪಮವಾದದ್ದು. 50 ವರ್ಷಗಳ ಕಾಲ ದೀರ್ಘವಾದ ರಾಜಕೀಯ ಸೇವೆ ಅವರದ್ದು. ಕುಗ್ರಾಮವೊಂದರ ಗುಡಿಸಲಿನಲ್ಲಿ 1908, ಏಪ್ರಿಲ್ 5 ರಂದು ಜನಿಸಿದ ಪೋರನೊಬ್ಬ ದಿಲ್ಲಿಯ ರಾಜಕೀಯ ಗದ್ದುಗೆಯವರೆಗೆ ಬೆಳೆದು ನಿಂತದ್ದು ಸಾಮಾನ್ಯ ಮಾತಲ್ಲ. ರಾಷ್ಟ್ರರಾಜಕಾರಣದಲ್ಲಿ ನಾಲ್ಕು ದಶಕಗಳಿಗೂ ಮೀರಿ ವಿವಿಧ ಇಲಾಖೆಗಳಲ್ಲಿ ಸಂಪುಟ ದರ್ಜೆ ಮಂತ್ರಿಯಾಗಿ ಬಾಬೂಜಿ ಅಧಿಕಾರ ನಡೆಸಿದರು. ಶ್ರೇಣೀಕೃತ ವ್ಯವಸ್ಥೆಯಲ್ಲಿ ಪ್ರತಿಕೂಲ ಪರಿಸ್ಥಿತಿಗಳನ್ನು ಎದುರಿಸಿ; ಬಾಬೂಜಿ ರಾಷ್ಟ್ರ ನಾಯಕರಾಗಿ ಬೆಳೆದಿದ್ದರಲ್ಲಿ ತುಂಬ ಪರಿಶ್ರಮವಿದೆ. ಭಾರತದ ಉಪಪ್ರಧಾನಿಯಂತಹ ಮಹತ್ವದ ಸ್ಥಾನವನ್ನು ಅಲಂಕರಿಸಿದ ಬಾಬೂಜಿ ಅವರು ಕಾರ್ಮಿಕ ಸಚಿವರಾಗಿ, ಸಾರಿಗೆ ಮತ್ತು ಸಂಪರ್ಕ ಸಚಿವರಾಗಿ, ರೈಲ್ವೆ ಸಚಿವರಾಗಿ, ಕೃಷಿ ಮತ್ತು ನೀರಾವರಿ ಸಚಿವರಾಗಿ, ರಕ್ಷಣಾ ಸಚಿವರಾಗಿ ಸೇವೆ ಸಲ್ಲಿಸಿ ತಮ್ಮ ಹೆಜ್ಜೆ ಗುರುತುಗಳನ್ನು ಮೂಡಿಸಿ, ಮೈಲಿಗಲ್ಲುಗಳನ್ನು ಸ್ಥಾಪಿಸಿದರು ಹಾಗೂ ಸಾಮಾಜಿಕ ನ್ಯಾಯ ಮತ್ತು ಪ್ರಜಾಪ್ರಭುತ್ವದ ಪ್ರತಿಪಾದನೆಯ ಕಟ್ಟಾಳಾಗಿ ಸಂಸತ್ತಿನಲ್ಲಿ ಜಗಜೀವನರಾಮ್ ವಹಿಸಿದ ಪಾತ್ರ ಅವಿಸ್ಮರಣೀಯವಾದುದು.

ಬಾಬೂಜಿ ರಾಜಕೀಯಕ್ಷೇತ್ರ ಪ್ರವೇಶ ಮಾಡಿದ್ದು ಜನಸೇವೆಗಾಗಿ. 1934ರ ಸುಮಾರಿಗೆ ಬಿಹಾರದಲ್ಲಿ ಭೂಕಂಪವಾಗಿ ಜನಜೀವನ ಅಸ್ತವ್ಯಸ್ಥಗೊಂಡಿತ್ತು. ಸಂತ್ರಸ್ತರಿಗೆ ಪರಿಹಾರಗಳನ್ನು ಹಂಚುವ ಜವಾಬ್ದಾರಿಯನ್ನು ಗಾಂಧೀಜಿ ಜಗಜೀವನರಾಮ್ ಅವರಿಗೆ ವಹಿಸಿದರು. ಬಾಬೂಜಿ ಹಳ್ಳಿ ಹಳ್ಳಿಗಳಿಗೆ ಓಡಾಡಿ ಸಂತ್ರಸ್ತರನ್ನು ಗುರುತಿಸಿ; ಪ್ರಾಮಾಣಿಕತೆ ಮತ್ತು ನಿಷ್ಠೆಯಿಂದ ಕಾರ್ಯ ನಿರ್ವಹಿಸಿದರು. ಇದರಿಂದ ಗ್ರಾಮೀಣ ಮಟ್ಟದಲ್ಲಿ ಬಾಬೂಜಿ ಅವರು ಪ್ರಾಮಾಣಿಕ ಜನನಾಯಕರಾಗಿ ರೂಪುಗೊಳ್ಳಲು ಸಾಧ್ಯವಾಯಿತು.

ಬಾಬೂಜಿ ಅವರು ರಾಜಕೀಯ ಅಧಿಕಾರದ ಬೆನ್ನು ಹತ್ತಲಿಲ್ಲ. ಬದಲಿಗೆ ಅಧಿಕಾರವೇ ಅವರನ್ನು ಹುಡುಕಿಕೊಂಡು ಬಂತು. ಸಿಕ್ಕಿದ ಅಧಿಕಾರವನ್ನು ಬಾಬೂಜಿ ಜನರ ಸೇವೆಗಾಗಿ ಬಳಸಿದರು. ತಮ್ಮ ಕೈಕೆಳಗಿನ ಸಿಬ್ಬಂದಿಯನ್ನು ಎಂದೂ ತುಚ್ಛವಾಗಿ ಕಾಣಲಿಲ್ಲ; ಗೌರವದಿಂದ ನಡೆಸಿಕೊಳ್ಳುತ್ತಿದ್ದರು. ನೆಹರು ಸಂಪುಟದಲ್ಲಿ ಕಾರ್ಮಿಕ ಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಾಗ ಕಾರ್ಮಿಕರ ಕಲ್ಯಾಣಕ್ಕಾಗಿ ಅನೇಕ ರಚನಾತ್ಮಕ ಯೋಜನೆಗಳನ್ನು ರೂಪಿಸಿ ಅನುಷ್ಠಾನಕ್ಕೆ ತಂದರು. ಅವುಗಳಲ್ಲಿ ಕಾರ್ಮಿಕರಿಗೆ ಕನಿಷ್ಠ ವೇತನ, ಭವಿಷ್ಯ ನಿಧಿ, ರಾಜ್ಯ ವಿಮಾ ಯೋಜನೆಗಳು ಬಹುಮುಖ್ಯವಾದವು.

ಕಾರ್ಖಾನೆಗಳು ಮತ್ತು ಇತರೆ ದುಡಿಮೆ ಕ್ಷೇತ್ರಗಳಲ್ಲಿ ಪರಿಶಿಷ್ಟರೇ ಅಧಿಕ ಸಂಖ್ಯೆಯಲ್ಲಿರುವುದನ್ನು ಮನಗಂಡು ಬಾಬೂಜಿಯವರು ಕಾರ್ಮಿಕರ ಕಲ್ಯಾಣಕ್ಕಾಗಿ, ಕಾರ್ಮಿಕ ನ್ಯಾಯ ಮಂಡಳಿಗಳನ್ನು ಅಸ್ತಿತ್ವಕ್ಕೆ ತಂದರು. ಈ ಸಹಾಯಕ್ಕೆ ಗಣಿಕಾರ್ಮಿಕರು 'ಧನಬಾದ್' ನಲ್ಲಿ 'ಜಗಜೀವನರಾಮ್‌ನಗರಿ' ಎಂಬ ಹೊಸ ಬಡಾವಣೆ ನಿರ್ಮಿಸಿ ಅವರ ಸ್ಮರಣೆಯನ್ನು

**ಪು.ತಿ.ನೋ.**



ಶಾಶ್ವತಗೊಳಿಸಿದ್ದಾರೆ. ಬಾಬೂಜಿಯವರನ್ನು 'ಕಾರ್ಮಿಕ ಕಾಯ್ದೆಗಳ ಶಿಲ್ಪಿ' ಎಂದೇ ದೇಶ ಗೌರವದಿಂದ ಕರೆಯಿತು.

ಸ್ವಾತಂತ್ರ್ಯ ಪೂರ್ವದಲ್ಲಿ ರೈಲ್ವೆ ಬೋಗಿಗಳಲ್ಲಿ ಹಿಂದೂಗಳಿಗೆ ಮತ್ತು ಮುಸ್ಲಿಮರಿಗೆ ಪ್ರತ್ಯೇಕ ನೀರಿನ ಗಡಿಗೆಗಳಿದ್ದವು. ಬ್ರಿಟಿಷರ ಆಡಳಿತದಲ್ಲಿ ಇವುಗಳನ್ನು 'ಹಿಂದೂ ಪಾನಿ' ಮತ್ತು 'ಮುಸ್ಲಿಂ ಪಾನಿ' ಎಂದು ಕರೆಯಲಾಗುತ್ತಿತ್ತು. ಸ್ವಾತಂತ್ರ್ಯ ಬಂದ ಮೇಲೆ ಎಲ್ಲಾ ಜನಾಂಗದವರಿಗಾಗಿ 'ಪಂಡಿತ್ ಪಾನಿ' ಎಂಬ ಹೊಸ ವ್ಯವಸ್ಥೆ ಮಾಡಲಾಯಿತು. ದಲಿತರಿಗೆ ಇದರಲ್ಲಿ ಅವಕಾಶ ಕಲ್ಪಿಸಿರಲಿಲ್ಲ. ಬಾಬೂಜಿಯವರು ರೈಲ್ವೆ ಮಂತ್ರಿ ಆದಾಗ ಈ ಪದ್ಧತಿಯನ್ನು ರದ್ದುಪಡಿಸಿದ್ದಲ್ಲದೆ, ಎಲ್ಲಾ ಜಾತಿ ಮತದವರಿಗೂ ನೀರು ಸಿಗುವಂತೆ ಮಾಡಿದರು. ಜಗಜೀವನರಾಮ್ ಅವರು ರಕ್ಷಣಾ ಮಂತ್ರಿಯಾದಾಗಲು ಮಹತ್ತರವಾದ ಬದಲಾವಣೆ ಮಾಡಿದ್ದಲ್ಲದೇ ದೇಶದ ಸೇನಾ ನೇಮಕಾತಿಯಲ್ಲಿ ಕ್ಷತ್ರಿಯರಿಗೆ ಹೆಚ್ಚು ಅವಕಾಶ ಕಲ್ಪಿಸಲಾಗಿತ್ತು. ಬಾಬೂಜಿ ಅದನ್ನು ಬದಲಾಯಿಸಿ, ಎಲ್ಲಾ ಜಾತಿಯವರಿಗೂ ಅವಕಾಶ ಒದಗಿಸಿದರು. ಕ್ಷತ್ರಿಯ ವರ್ಗದವರೇ ಯುದ್ಧ ಮಾಡಬೇಕೆಂಬ ಕಲ್ಪನೆ ಸರಿಯಲ್ಲ ಎಂಬುದು ಅವರ ಪ್ರತಿಪಾದನೆಯಾಗಿತ್ತು.

ಬಾಬೂಜಿ ಅವರು 1956ರಲ್ಲಿ ಸಾರಿಗೆ ಮತ್ತು ಸಂಪರ್ಕ ಸಚಿವರಾದರು. ಆಗ ಏರ್‌ಇಂಡಿಯಾ ಮತ್ತು ಇಂಡಿಯನ್‌ಏರ್‌ಲೈನ್ಸ್ ಸಂಸ್ಥೆಗಳನ್ನು ರಚಿಸಿದರು. ರಾಷ್ಟ್ರದ ನಾನಾ ಭಾಗಗಳಲ್ಲಿ ಅಂಚೆ ಮತ್ತು ತಂತಿ ಕಚೇರಿ ಸ್ಥಾಪಿಸಿ ದೇಶದ ಪ್ರಗತಿಗೆ ಕಾರಣವಾದರು. 1970ರಲ್ಲಿ ರಕ್ಷಣಾ ಮಂತ್ರಿಯಾದಾಗ ಭಾರತ–ಪಾಕಿಸ್ತಾನಗಳ ಮಧ್ಯೆ ನಡೆದ ಯುದ್ಧದಲ್ಲಿ ಭಾರತಕ್ಕೆ ಅಭೂತಪೂರ್ವ ಜಯ ದೊರಕಿಸಿಕೊಟ್ಟು; ಸ್ವತಂತ್ರ ಬಾಂಗ್ಲಾದೇಶ ಉದಯವಾಗಲು ಕಾರಣವಾದರು. ಅದಕ್ಕಾಗಿ ಬಾಬೂಜಿ ಅವರನ್ನು ಪ್ರಧಾನಿ ಇಂದಿರಾಗಾಂಧಿಯವರು ಮುಕ್ತ ಕಂಠದಿಂದ ಪ್ರಶಂಸಿಸಿದರು.

1975ರಲ್ಲಿ ಇಂದಿರಾಗಾಂಧಿ ತುರ್ತು ಪರಿಸ್ಥಿತಿ ಘೋಷಿಸಿದರು. ಸಚಿವರಾಗಿದ್ದಾಗ ಬಾಬೂಜಿ ಅವರು ಸಂಪುಟ ಸಭೆಯಲ್ಲಿ ಅದನ್ನು ವಿರೋಧಿಸುತ್ತಾರೆ. "ಇಡೀ ದೇಶದ ವಾತಾವರಣ ಗದ್ದಲಮಯವಾಗುವುದು, ಜನಜೀವನ ಅಸ್ತವ್ಯಸ್ತಗೊಳ್ಳುವುದು, ದೇಶದ ಹಿತದೃಷ್ಟಿಯಿಂದ ತುರ್ತುಪರಿಸ್ಥಿತಿಯನ್ನು ವಾಪಸ್ಸು ಪಡೆಯುವುದು ಸೂಕ್ತ" ಎಂದು ಸಲಹೆ ಕೊಡುತ್ತಾರೆ. ಅದು ಪ್ರಯೋಜನವಾಗುವುದಿಲ್ಲ. ಇಂದಿರಾಗಾಂಧಿ ಅವರ ನಡೆಯಿಂದ ಬೇಸತ್ತು, ಅಪ್ಪಟ ಪ್ರಜಾಪ್ರಭುತ್ವವಾದಿಯಾದ ಜಗಜೀವನರಾಮ್ ಅವರು ಸಚಿವ ಸಂಪುಟಕ್ಕೆ ರಾಜೀನಾಮೆ ನೀಡಿ 30–35 ವರ್ಷಗಳ ಕಾಂಗ್ರೆಸ್ ಪಕ್ಷದೊಂದಿಗಿನ ಸಂಬಂಧವನ್ನು ತ್ಯಜಿಸುತ್ತಾರೆ.

ಅಷ್ಟೇ ಅಲ್ಲದೆ ತಮ್ಮದೇ ಆದ ಸ್ವತಂತ್ರ ಪಕ್ಷ (ಕಾಂಗ್ರೆಸ್ ಫಾರ್ ಡೆಮಾಕ್ರಸಿ)ವನ್ನು ಕಟ್ಟುತ್ತಾರೆ. ಅದರಲ್ಲಿ ನಂದಿಸತ್ಪತಿ, ಎಚ್.ಎನ್. ಬಹುಗುಣ ಮೊದಲಾದ ನಾಯಕರು ಭಾಗಿಗಳಾಗುತ್ತಾರೆ. 1977ರ ಲೋಕಸಭಾ ಚುನಾವಣೆಯಲ್ಲಿ ಈ ಪಕ್ಷ, ಜನತಾ ಪಕ್ಷವನ್ನು ಬೆಂಬಲಿಸುತ್ತದೆ. ಬಾಬೂಜಿ ರಾಷ್ಟ್ರದ ಅನೇಕ ಭಾಗಗಳಲ್ಲಿ ಮಿಂಚಿನ ಪ್ರಚಾರಕೈಗೊಂಡು ಐತಿಹಾಸಿಕವೆಂಬಂತೆ ತಮ್ಮ ಪಕ್ಷದ 40ಕ್ಕೂ ಹೆಚ್ಚು ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತಾರೆ. ಬಾಬೂಜಿ ಕೇವಲ ದಲಿತ ನಾಯಕರಾಗಿರಲಿಲ್ಲ. ದೇಶದ ಸಾಮೂಹಿಕ (Mass Leader) ನಾಯಕರಾಗಿ ಹೊರಹೊಮ್ಮಿದವರು. ಆಗ ಜಗಜೀವನರಾಮ್ ಅವರೇ ಪ್ರಧಾನ ಮಂತ್ರಿಯಾಗುತ್ತಾರೆಂದು ಜನ ಭಾವಿಸಿದ್ದರು. ಆದರೆ ಆಗಿದ್ದೇ ಬೇರೆ, ಜಾತಿಯ ವಿಷವರ್ತುಲ ಅವರನ್ನು ಪ್ರಧಾನಿಯಾಗದಂತೆ ಮಾಡಿತು. ಶೋಷಿತ ವರ್ಗದ ಧ್ವನಿಯಾಗಿದ್ದ ಬಾಬೂಜಿ ಅವಕಾಶ ವಂಚಿತರಾದರು. ಜನತಾ ಪಕ್ಷದ ಅಭೂತಪೂರ್ವ ಯಶಸ್ಸಿಗೆ ಕಾರಣರಾದ ಬಾಬೂಜಿಯವರ ಮನವೊಲಿಸಿದ ಜಯಪ್ರಕಾಶ್ ನಾರಾಯಣ, ಅವರನ್ನು ಉಪಪ್ರಧಾನಿಯಾಗಲು ಒಪ್ಪಿಸುತ್ತಾರೆ. ಪ್ರಧಾನಿಯಾಗಿ ಮುರಾರ್ಜಿದೇಸಾಯಿ ಅವರನ್ನು ಆಯ್ಕೆ ಮಾಡಲಾಗುತ್ತದೆ. ಅವರ ಸಂಪುಟದಲ್ಲಿ ಬಾಬೂಜಿ ಮತ್ತೆ ರಕ್ಷಣಾ ಮಂತ್ರಿಯಾಗಿ; ಶೋಷಿತ ವರ್ಗದ ಏಳಿಗೆಗೆ ತಮ್ಮನ್ನು ಅರ್ಪಿಸಿಕೊಳ್ಳುತ್ತಾರೆ.

**– ಶ್ರೀ ನಂದೀಶ ಎ.ಆರ್.**

ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ



## Special Lecture - 07.12.2021
## Topic: Compititive Exams

Resource Person: **Sri Manjunath,** Administrative Officer, Gurudev Academy, Dharawada





# ಗುರಿ ಸಾಧಿಸುವ ಮನೋಸ್ಥೈರ್ಯ ಮೈಗೂಡಿಸಿಕೊಳ್ಳಿ

• **ಕನ್ನಡಪ್ರಭ ವಾರ್ತೆ** ಮೈಸೂರು

ನಾಗರೀಕ ಸೇವಾ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಬೇಕಾದರೆ, ಅಭ್ಯರ್ಥಿಯಲ್ಲಿ ಇರುವ ಸಕಾರಾತ್ಮಕ ಹಾಗೂ ಪ್ರೇರಣಾತ್ಮಕ ಅಂಶಗಳ ಜೊತೆಗೆ ನಿರಂತರ ಪರಿಶ್ರಮ ಹಾಗೂ ಗುರಿ ಸಾಧಿಸುವ ಮನೋಸ್ಥೈರ್ಯವನ್ನು ವಿದ್ಯಾರ್ಥಿಗಳು ಮೈಗೂಡಿಸಿಕೊಳ್ಳಬೇಕು ಎಂದು ಧಾರಾವಾಡದ ಗುರುದೇವ್ ಐಎಎಸ್ ಹಾಗೂ ಕೆಎಎಸ್ ಅಕಾಡೆಮಿಯ ಆಡಳಿತಾಧಿಕಾರಿ ಟಿ.ಎಂ. ಮಂಜುನಾಥ್ ತಿಳಿಸಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗ, ಎಂಟ್ರಿ ಟು ಸರ್ವೀಸ್ ಮತ್ತು ಐಕ್ಯೂಎಸಿ ಘಟಕಗಳ ಸಂಯುಕ್ತಾಶ್ರಯದಲ್ಲಿ ನಡೆದ ನಾಗರಿಕ ಸೇವಾ ಪರೀಕ್ಷೆಗಳ ಕುರಿತು ವಿಶೇಷ ಉಪನ್ಯಾಸ ಹಾಗೂ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.



ನಾಗರಿಕ ಸೇವಾ ಪರೀಕ್ಷೆಗಳ ಕುರಿತು ವಿಶೇಷ ಉಪನ್ಯಾಸ ಹಾಗೂ ಸಂವಾದ ಕಾರ್ಯಕ್ರಮ ನಡೆಯಿತು.

ಪ್ರತಿ ವರ್ಷ ಫೆಬ್ರವರಿ ತಿಂಗಳಂದು ನಾಗರೀಕ ಸೇವಾ ಪರೀಕ್ಷೆಗಳ ಸುತ್ತೋಲೆ ಹೊರಡಿಸಲಾಗುತ್ತದೆ. ಈ ಪೂರ್ವಭಾವಿ ಪರೀಕ್ಷೆಗಳನ್ನು ತೇರ್ಗಡೆ ಹೊಂದಲು ವಿದ್ಯಾರ್ಥಿಗಳಲ್ಲಿ ಕಟು ಪರಿಶ್ರಮ, ಸಂವಹನ ಕೌಶಲ್ಯ, ಇತಿಹಾಸ, ಸಂವಿಧಾನ, ಅರ್ಥಶಾಸ್ತ್ರ, ಸಾಮಾಜಿಕ, ಭೌಗೋಳಿಕ ಹಾಗೂ ಪ್ರಸಕ್ತ ರಾಷ್ಟ್ರೀಯ, ಅಂತಾರಾಷ್ಟ್ರೀಯ ವಿದ್ಯಮಾನಗಳ ಅಧ್ಯಯನ ಅವಶ್ಯಕ ಎಂದರು.

ನಾಗರಿಕ ಸೇವಾ ಪರೀಕ್ಷೆಗಳಲ್ಲಿ ಹೆಚ್ಚಾಗಿ ತೌಲನಿಕ ವಿಶ್ಲೇಷಣೆ ಮಾಡುವ ಪ್ರಶ್ನೆಗಳು ಇರುತ್ತವೆ. ವಿಷಯದ ಆಳವಾದ ಜ್ಞಾನ, ಸಾಮಾನ್ಯ ತಿಳವಳಿಕೆ, ನೈತಿಕತೆ, ಬರೆಯುವ ಹಾಗೂ ಓದುವ ಕೌಶಲ್ಯ ಮುಖ್ಯವಾಗುತ್ತದೆ. ತಾವು ತೆಗೆದುಕೊಂಡ ವಿಷಯದ ಬಗ್ಗೆ ಪುಸ್ತಕಗಳನ್ನು ಆಸಕ್ತಿಯಿಂದ ಮನಸಿಟ್ಟು ಓದುವುದು, ಸುದ್ದಿ ಪತ್ರಿಕೆಗಳಲ್ಲಿ ಬರುವ ಸಂಪಾದಕೀಯ, ಅಂಕಣ ಮತ್ತು ಇತರ ಪ್ರಚಲಿತ ವಿದ್ಯಮಾನಗಳನ್ನು ಕುರಿತ ಲೇಖನಗಳನ್ನು ದಿನನಿತ್ಯ ಓದುವುದು, ಟಿಪ್ಪಣಿ ಮಾಡುವುದು ಹಾಗೂ ವಿಶ್ಲೇಷಣೆ ಮಾಡುವುದು ಅಗತ್ಯ ಎಂದು ಅವರು ಹೇಳಿದರು.

ಪಠ್ಯ ವಿಷಯ, ಸಾಮಾನ್ಯ ಜ್ಞಾನದ ಬಗ್ಗೆ ಕೆಲವು ವರ್ಷಗಳ ಆಳವಾದ ಅಧ್ಯಯನದ ಅಗತ್ಯತೆ ಇದ್ದರೆ ಮಾತ್ರ ಗೆಲುವು ಸಾಧಿಸಬಹುದು.

ಆಸಕ್ತ ವಿದ್ಯಾರ್ಥಿಗಳು ಇಂದಿನಿಂದಲೇ ನೀವು ಪರಿಶ್ರಮ, ಸಿದ್ಧತೆ, ಆತ್ಮವಿಶ್ವಾಸ, ವಿಶಾಲ ಮನೋಭಾವನೆ ಇವೆಲ್ಲವನ್ನು ನಿಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ನಾಗರೀಕ ಸೇವಾ ಪರೀಕ್ಷೆಗಳನ್ನು ದಾಟಿ, ಉನ್ನತ ಹುದ್ದೆಗಳು ಲಭಿಸುವಂತಾಗುತ್ತವೆ ಎಂದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಗುರುದೇವ ಅಕಾಡೆಮಿಯ ತಾಂತ್ರಿಕ ವಿಭಾಗದ ಮುಖ್ಯಸ್ಥ ಮೌನೇಶ್, ಇತಿಹಾಸ ವಿಭಾಗದ ಮುಖ್ಯಸ್ಥರು ಡಾ. ಎಚ್. ಶ್ರೀಧರ, ಡಾ.ಎ.ಜಿ. ಧರ್ಮೇಶ್, ಎ.ಆರ್. ನಂದೀಶ ಇದ್ದರು.



**Special Lecture - 21.12.2021**

**Topic: Introduction to Archeaology**

Resource Person: **Dr. Shalvapille Iyengar,**

Chairman, DoS in Ancient History & Archeaology, KSOU, Mysuru.




ಮೈಸೂರು ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಇತಿಹಾಸ ವಿಭಾಗ ಮತ್ತು ಐಕ್ಯೂಎಸಿ ಸಹಯೋಗದಲ್ಲಿ 'ಪುರಾತತ್ವಶಾಸ್ತ್ರ ಪರಿಚಯ' ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ ಆಯೋಜಿಸಿದ್ದು, ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಪ್ರಾಧ್ಯಾಪಕರೂ ಹಾಗೂ ಹೆಸರಾಂತ ಆಧ್ಯಾತ್ಮಿಕ ಚಿಂತಕರು ಆದ ಡಾ. ಶಲ್ವಪಿಳ್ಳೆ ಅಯ್ಯಂಗಾರ್ ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿ ಮಾತನಾಡುತ್ತಾ, ಪ್ರಾಚೀನ ಇತಿಹಾಸದ ವಿವಿಧ ಕಾಲಘಟ್ಟಗಳು, ನಾಣ್ಯಶಾಸ್ತ್ರ, ಶಾಸನಶಾಸ್ತ್ರ ಹಾಗೂ ಪುರಾತತ್ವ ಅವಶೇಷಗಳ ಸಂಶೋಧನೆಯಲ್ಲಿ ತಂತ್ರಜ್ಞಾನದ ಬಳಕೆ, ವಿವಿಧ ಕಾಲ ಘಟ್ಟಗಳ ಅನ್ವೇಷಣೆ, ಪ್ರಾಗೈತಿಹಾಸಿಕ ಕಾಲದ ವಿವಿಧ ಹಂತಗಳನ್ನು ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ಮಾನವನ ಅನಾಗರಿಕತೆಯ ಕಾಲಘಟ್ಟದಿಂದ ನಾಗರಿಕತೆಯ ಆಧುನಿಕ ಕಾಲಘಟ್ಟದವರೆಗಿನ ವಿವಿಧ ಐತಿಹಾಸಿಕ ಬದಲಾವಣೆಗಳು ಹಾಗೂ ಬೆಳವಣಿಗೆಗಳನ್ನು ಕುರಿತು ಮಾಹಿತಿ ನೀಡಿದರು. ಅದೇ ರೀತಿ ಪುರತತ್ವಶಾಸ್ತ್ರಕ್ಕೆ ಸಂಬಂಧಪಟ್ಟ ಕೆಲವು ಸಂಗತಿಗಳನ್ನು, ಇತಿಹಾಸ ಹಾಗೂ ಪುರತತ್ವಶಾಸ್ತ್ರದ ನಡುವಿನ ಸಾಮ್ಯತೆಯನ್ನು, ಪುರಾತತ್ವ ಹಾಗೂ ವಿಜ್ಞಾನ ಕ್ಷೇತ್ರದ ನಡುವಿನ ಸಂಬಂಧವನ್ನು ಉದಾಹರಣೆಗಳ ಸಮೇತ ವಿದ್ಯಾರ್ಥಿಗಳಿಗೆ ವಿವರಿಸಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ ಅವರು ಅಧ್ಯಕ್ಷತೆ ವಹಿಸಿದ್ದರು, ಕಾಲೇಜಿನ ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳಾದ ಡಾ. ಎಸ್.ಆರ್. ರಮೇಶ್, ಇತಿಹಾಸ ವಿಭಾಗದ ಮುಖ್ಯಸ್ಥರಾದ ಡಾ. ಶ್ರೀಧರ ಹೆಚ್, ಉಪನ್ಯಾಸಕರಾದ ಡಾ. ಧರ್ಮೇಶ ಎ.ಜಿ., ಶ್ರೀ ನಂದೀಶ ಎ.ಆರ್. ಹಾಗೂ ವಿಭಾಗದ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



**BoS Meeting - History - 2021-22**
**20.11.2021**






ಶಿಕ್ಷಣದಿಂದ ಶ್ರೇಷ್ಠತೆ

ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜು (ಸ್ವಾಯತ್ತ)

ಜಯಲಕ್ಷ್ಮೀಪುರಂ, ಮೈಸೂರು–12

ಶ್ರೇಷ್ಠತೆಯ ಸಾಮರ್ಥ್ಯವುಳ್ಳ ಕಾಲೇಜು

ಇತಿಹಾಸ ವಿಭಾಗ

Dept. of History


ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಯೋಜನೆಗೊಂಡು, ನ್ಯಾಕ್‌ನಿಂದ 'ಎ' ಮಾನ್ಯತೆ ಪಡೆದಿದೆ.




ಸಂಚಿಕೆ: 32 ಜನವರಿ 2022 | ಪ್ರಧಾನ ಸಂಪಾದಕರು: ಡಾ. ಬಿ.ಆರ್. ಜಯಕುಮಾರಿ, ಪ್ರಾಂಶುಪಾಲರು | www.mahajanafgc.com | ಸಂಪಾದಕರು: ಡಾ.ಶ್ರೀಧರ ಹೆಚ್, ಇತಿಹಾಸ ವಿಭಾಗ | ಪುಟಗಳು: 08

## ಸಂಪಾದಕೀಯ

### ನೇತಾಜಿ ಸುಭಾಷ್ ಚಂದ್ರ ಬೋಸ್ ಜೀವನ ಪಥ




ಜನನ – ಜನವರಿ 23, 1837

ಮರಣ – ಆಗಸ್ಟ್ 18, 1945 (ತೈವಾನ್)

ಜನ್ಮಸ್ಥಳ – ಒರಿಸ್ಸಾದ ಕಟಕ್

ತಂದೆ – ಜಾನಕೀನಾಥ ಬೋಸ್

ತಾಯಿ – ಪ್ರಭಾವತಿ

ಹೆಂಡತಿ – ಎಮಿಲಿ ಶೆಂಕ್ಲ್

ಬಿರುದು – ನೇತಾಜಿ

ಘೋಷಣೆ – ನನಗೆ ರಕ್ತ ಕೊಡಿ, ನಾನು ನಿಮಗೆ ಸ್ವಾತಂತ್ರ್ಯ ನೀಡುತ್ತೇನೆ.


- ಬೋಸ್‌ರು ಐಸಿಎಸ್ ಪರೀಕ್ಷೆಯಲ್ಲಿ 4ನೇ ರ್‍ಯಾಂಕ್ ಗಳಿಸಿದ್ದರೂ ದೇಶಾಭಿಮಾನದಿಂದ ಬ್ರಿಟಿಷರು ನೀಡಿದ್ದ ಪ್ರತಿಷ್ಠಿತ ಹುದ್ದೆಯನ್ನು ತ್ಯಜಿಸಿ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು.
- 1938ರ ಹರಿಪುರ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾಗಿದ್ದರು.
- 1939 ರಲ್ಲಿ ಫಾರ್ವರ್ಡ್ ಬ್ಲಾಕ್ ಎಂಬ ಹೊಸ ಪಕ್ಷವನ್ನು ಸ್ಥಾಪಿಸಿದರು.
- ಬ್ರಿಟಿಷರ ಯುದ್ಧ ತಯಾರಿಯನ್ನು ಹಾಗೂ ಜಾಗತಿಕ ಯುದ್ಧದಲ್ಲಿ ಭಾರತದ ಪಾಲ್ಗೊಳ್ಳುವಿಕೆಯನ್ನು ಸುಭಾಷ್‌ರು ವಿರೋಧಿಸಿದ್ದರ ಪರಿಣಾಮ ಬ್ರಿಟಿಷ್ ಸರ್ಕಾರವು ಬೋಸ್‌ರನ್ನು ಬಂಧಿಸಿ ಗೃಹಬಂಧನದಲ್ಲಿರಿಸಿದರು.
- ಬೋಸ್‌ರು ಗೃಹಬಂಧನದಿಂದ ತಪ್ಪಿಸಿಕೊಂಡು ಜರ್ಮನಿಗೆ ತೆರಳಿದರು. ಜರ್ಮನಿಯ ಸರ್ವಾಧಿಕಾರಿ ಹಿಟ್ಲರ್ ಇವರಿಗೆ ಎಲ್ಲಾ ಸಹಾಯವನ್ನು ನೀಡುವ ಭರವಸೆಯನ್ನು ವ್ಯಕ್ತಪಡಿಸಿದರು.
- ಬೋಸ್‌ರು ಜರ್ಮನಿಯಲ್ಲಿ ಭಾರತೀಯ ಯುದ್ಧ ಕೈದಿಗಳನ್ನು ಸಂಘಟಿಸಿದರು. 'ಆಜಾದ್ ಹಿಂದ್ ರೇಡಿಯೋ' ಮೂಲಕ ತಮ್ಮ ಭಾಷಣಗಳನ್ನು ಭಾರತೀಯರಿಗೆ ಪ್ರಸಾರ ಮಾಡಿದರು.
- ರಾಸ್ ಬಿಹಾರಿ ಬೋಸ್‌ರವರು ಟೋಕಿಯೋದಲ್ಲಿ ಸ್ಥಾಪಿಸಿದ ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್‌'ನ ಸೇನಾ ವಿಭಾಗವನ್ನು 'ಭಾರತೀಯ ರಾಷ್ಟ್ರೀಯ ಸೇನೆ (INA-Indian National Army) ಎಂದು ಕರೆಯುತ್ತಿದ್ದರು. ನಂತರ INA ಮುಖಂಡತ್ವವನ್ನು ಸುಭಾಷ್ ಚಂದ್ರ ಬೋಸ್‌ರು ವಹಿಸಿಕೊಂಡರು.
- ಈ ಸೈನ್ಯವನ್ನು ಬೋಸ್‌ರು ಅಜಾದ್ ಹಿಂದ್ ಫೌಜ್ ಎಂದು ಕರೆದರು.
- INA ಧ್ಯೇಯವಾಕ್ಯ – ಇತ್ತೇಹಾದ್,
- INA ಲಾಂಛನ – ಹುಲಿ
- ಸಿಂಗಪುರದಲ್ಲಿ 1943ರಲ್ಲಿ INA ಯನ್ನು ಆಜಾದ್ ಹಿಂದ್ ಫೌಜ್ ಎಂದು ನಾಮಕರಣ ಮಾಡಿದರು.
- INA ದಲ್ಲಿ ಝಾನ್ಸಿ ರೆಜಿಮೆಂಟ್ ಎಂಬ ವಿಭಾಗವೂ ಇತ್ತು. ಕ್ಯಾಪ್ಟನ್ ಲಕ್ಷ್ಮೀ ಸೆಹಗಲ್ ಈ ರೆಜಿಮೆಂಟ್‌ನ ನೇತೃತ್ವವನ್ನು ವಹಿಸಿದರು.
- 1942 ರಲ್ಲಿ INA ಮೊದಲ ತುಕಡಿಯನ್ನು ಸ್ಥಾಪಿಸಿದವರು ಮೋಹನ್ ಸಿಂಗ್.

ಪು.ತಿ.ನೋ.



- 1943 ರಲ್ಲಿ ಬೋಸ್‌ರು ಸಿಂಗಪುರದಲ್ಲಿ ಸ್ವತಂತ್ರ ಭಾರತದ ತಾತ್ಕಾಲಿಕ ಸರ್ಕಾರವನ್ನು ಸ್ಥಾಪಿಸಿದರು.
- ಸುಭಾಷ್ ಚಂದ್ರ ಬೋಸ್‌ರು 'ದೆಹಲಿ ಚಲೋ'ಗೆ ಕರೆ ನೀಡಿದರು. 'ನನಗೆ ರಕ್ತ ಕೊಡಿ ನಾನು ನಿಮಗೆ ಸ್ವಾತಂತ್ರ್ಯವನ್ನು ಕೊಡಿಸುತ್ತೇನೆಂದು' ಘೋಷಿಸಿದರು.
- 1943 INA ಅಂಡಮಾನ್ ಮತ್ತು ನಿಕೋಬಾರ್‌ಗೆ ಬಂದು ತ್ರಿವರ್ಣ ಧ್ವಜವನ್ನು ಹಾರಿಸಿದರು.
- ಅಂಡಮಾನ್‌ಗೆ 'ಶಾಹಿದ್' ಮತ್ತು ನಿಕೋಬಾರ್‌ಗೆ 'ಸ್ವರಾಜ್' ಎಂದು ನಾಮಕರಣ ಮಾಡಿದರು.
- ಸುಭಾಷ್‌ರು ರಂಗೂನಿನ ಮೂಲಕ ಬ್ರಿಟಿಷರ ಕೈಯಲ್ಲಿದ್ದ ದೆಹಲಿಯನ್ನು ವಶಪಡಿಸಿಕೊಳ್ಳಲು ಯುದ್ಧ ತಂತ್ರವನ್ನು ರೂಪಿಸಿದರು.
- 1944 ರಲ್ಲಿ ಷಾ ನವಾಜ್‌ಖಾನ್ ನೇತೃತ್ವದ INA ಬರ್ಮಾ ಗಡಿಯ ಮೂಲಕ ಕೊಯಿಮಾ, ಇಂಫಾಲಗಳನ್ನು ವಶಪಡಿಸಿಕೊಂಡಿತು.
- 2ನೇ ಮಹಾಯುದ್ಧದಲ್ಲಿ ಜಪಾನ್ ಸೋತ ನಂತರ INA ಸೈನಿಕರು ಬ್ರಿಟಿಷರಿಗೆ ವಶವಾದರು.
- INA ಸೈನಿಕರ ವಿಚಾರಣೆಯು ಕೆಂಪುಕೋಟೆ ವಿಚಾರಣೆಗಳೆಂದರೆ ಪ್ರಸಿದ್ಧ (1945–1946).
- INA ವಿಚಾರಣೆಯು ದೆಹಲಿಯ ಕೆಂಪುಕೋಟೆಯಲ್ಲಿ ನಡೆಯಿತು. ಇವರ ಪರ ಜವಾಹರಲಾಲ್ ನೆಹರೂ, ಅಸಫ್ ಅಲಿ, ತೇಜ ಬಹದ್ದೂರ್ ಸಪ್ರೂರವರು ವಾದಿಸಿದರು. ನೆಹರೂರವರು ಕೊನೆಯ ಬಾರಿ ಕೋಟನ್ನು ಧರಿಸಿ ವಾದ ಮಾಡಿದರು.
- 1945 ರಲ್ಲಿ ಜಪಾನ್ ಸೋತಾಗ ರಷ್ಯಾ ಸಹಾಯವನ್ನು ಪಡೆಯುವ ಉದ್ದೇಶದಿಂದ ವಿಮಾನದಲ್ಲಿ ಪ್ರಯಾಣ ಮಾಡುವ ಸಂದರ್ಭದಲ್ಲಿ ತೈವಾನ್ ಬಳಿ ವಿಮಾನ ಅಪಘಾತದಲ್ಲಿ ಮರಣ ಹೊಂದಿದರು ಎಂದು ಹೇಳಲಾಗುತ್ತಿದೆ.
- ಬ್ರಿಟಿಷ್ ಸರ್ಕಾರ ಷಾ ನವಾಜ್ ಖಾನ್, ಪಿ.ಕೆ.ಸೆಹಗಲ್ ಮತ್ತು ಜಿ.ಎಸ್.ದಿಲ್ಲಾನ್‌ರನ್ನು ಗಲ್ಲಿಗೇರಿಸಿ ಉಳಿದ ಸೈನಿಕರಿಗೆ ಶಿಕ್ಷೆಯನ್ನು ಕಡಿಮೆ ಮಾಡಿತು.

**– ಡಾ. ಶ್ರೀಧರ ಹೆಚ್.**
ಮುಖ್ಯಸ್ಥರು, ಇತಿಹಾಸ ವಿಭಾಗ





# ಪ್ರಾಚ್ಯವಿದ್ಯಾ ಸಂಶೋಧನಾಲಯ – ಕ್ಷೇತ್ರ ಅಧ್ಯಯನ ವರದಿ

**ಪ್ರಮುಖ ಅಂಶಗಳು:**

- ★ ಕೌಟಿಲ್ಯನ ಅರ್ಥಶಾಸ್ತ್ರದ ಬಗ್ಗೆ
- ★ ತಾಳೆಗರಿಗಳ ಪ್ರಮಾಣ ಹಾಗೂ ಅವುಗಳಲ್ಲಿನ ವಿಭಿನ್ನತೆ
- ★ ತಾಳೆಗರಿಗಳ ಸಂರಕ್ಷಣೆ ಮತ್ತು ಕಲಾಕೃತಿಗಳ ಹಸ್ತ ಪತ್ರಿಕೆ
- ★ ವಿವಿಧ ಲಿಪಿಯ ತಾಳೆಗರಿಗಳು
- ★ ಭೂರ್ಜ ಪತ್ರ ಎಂದರೇನು?
- ★ ಗಿರಿಜಾ ಕಲ್ಯಾಣ ಮತ್ತು ರಾಮಾಯಣ ಪುಸ್ತಕ
- ★ ಭಗವದ್ಗೀತಾ ಪುಸ್ತಕ ಹಾಗೂ ಕಾಗದದ ಹಸ್ತ ಪತ್ರಿಕೆ
- ★ ಕಾಲಿಪತ್ರ, ಮರದ ಪಟ್ಟಿ ಹಾಗೂ ಕಂಟ
- ★ ವಿಷ್ಣುವಿನ ದಶಾವತಾರ

ತಾಳೆ ಪತ್ರದಲ್ಲಿನ ಎಲೆಗಳು ಅವುಗಳನ್ನು ದಾರದಿಂದ ಕಟ್ಟಿರುತ್ತಾರೆ. ಏಕೆಂದರೆ ಅವುಗಳು ಬೇಗನೆ ಹಾಳಾಗಬಾರದು ಮತ್ತು ಎಲೆಗಳು ಉದುರಿ ಹೋಗಬಾರದೆಂದು ಕಟ್ಟಿರುತ್ತಾರೆ. ಎಲೆಗಳನ್ನು ಹೆಚ್ಚು ಬಿಗಿಯಾಗಿಯೂ ಆಗಬಾರದು. ಎಲೆಗಳು ಅಂಟಿಕೊಳ್ಳುತ್ತವೆ, ಏಕೆಂದರೆ ಲೆಮೆನ್‌ಗ್ರೋಸ್ ಎಂಬ ಎಣ್ಣೆಯನ್ನು ತಾಳೆಗರಿಗಳಿಗೆ ಹಚ್ಚಿರುತ್ತಾರೆ. ತಾಳೆಗರಿಗಳು ಇನ್ನಷ್ಟು ದಿನ ಬಾಳಿಕೆಗೆ ಬರಲಿ ಎಂಬ ಕಾರಣದಿಂದ ಹಚ್ಚಿರುತ್ತಾರೆ. ಅವರು ಚಿತ್ರಗಳನ್ನು ಸಹ ಬರೆಯುತ್ತಾ ಇದ್ದರು ಅಥವಾ 'ಅಷ್ಟೋನವಮಿ' ಚಿತ್ರಗಳನ್ನು ತಾಳೆಗರಿಗಳ ಮೇಲೆ ಬರೆಯುತ್ತಾ ಇದ್ದರು. ಅದೆಷ್ಟೋ ಊಹೆಗೂ ಮೀರಿದಷ್ಟು ಚಿತ್ರಗಳನ್ನು ಬರೆದು ಅವರು 'ದಶಾವತಾರ' ತೋರಿಸಿದ್ದಾರೆ. ಕಾಲದಿಂದ ಕಾಲಕ್ಕೆ ಬೇರೆಯಾಗುತ್ತಾ ಬರುತ್ತಿದೆ. 'ಸಿಟ್ರನಾಯಿಲ್'ಯಿಂದ 'ಲೆಮೆನ್‌ಗ್ರೋಸ್' ಆಯಿಲ್‌ನಿಂದ ತಾಳೆಗರಿಗಳನ್ನು ಸಂರಕ್ಷಿಸುತ್ತಿದ್ದಾರೆ. ಮೊದಲಿಗೆ ತಾಳೆಗರಿಗಳನ್ನು ಬಟ್ಟೆಯಿಂದ ವರೆಸಿ ನಂತರ ಸ್ವಲ್ಪ ಅದು ಕಲೆಯಾಗಿದ್ದರೆ ಸ್ಪಿರಿಟ್‌ನಿಂದ ಕಲೆಯನ್ನು ಹೋಗಿಸಿ ನಂತರ ಇವರು ಆಯಿಲನ್ನು ಅಚ್ಚುತ್ತಾರೆ. ಸ್ವಲ್ಪ ಸಮಯದ ನಂತರ ಅದನ್ನು ದಾರದಿಂದ ಕಟ್ಟಿ ಇಡುತ್ತಾರೆ.

**ಬೂರ್ಜ ಪತ್ರ**

ಇದು ದಕ್ಷಿಣ ಭಾರತದಲ್ಲಿ ಸಿಗುವುದಿಲ್ಲ. ಬೂರ್ಜ ಪತ್ರ ಉತ್ತರ ಭಾರತದಲ್ಲಿ ಸಿಗುತ್ತದೆ. ಇದನ್ನು ತೊಗಟೆಯಲ್ಲಿ ಇಂಕನ್ನು ಅಚ್ಚಿಕೊಂಡು ಇದನ್ನು ಬರೆಯಲಾಗುತ್ತದೆ. ಇದು ಬೂರ್ಜ ವೃಕ್ಷದ ಒಂದು ಅತ್ಯುತ್ತಮ ತೊಗಟೆಯಾಗಿದೆ. ಒಂದು ಪತ್ರವಿದೆ ಅದು ಪೇಪರ್ ಸೋಮ. ಇದು 'ಮುಮ್ಮಡಿ ಕೃಷ್ಣ ರಾಜ ಒಡೆಯರ್' ಕಾಲದ್ದು. ಇದನ್ನು ಅವರೇ ಬರೆದಿರುವಂತಹದ್ದು. ಚಿತ್ರಗಳ ಸಹಿತ ಅದನ್ನು ಕೃಷ್ಣರಾಜ ಒಡೆಯರು ಬರೆದಿದ್ದಾರೆ.

ಇದು ಜಿಲ್–ಜಾಗ್ ಆಗಿಯೇ ಬರುತ್ತದೆ. ಇದನ್ನು ಒಣಗಿಸಿ ಅದರ ಮೇಲೆ ಬಳದ ಸಹಾಯದಿಂದ ಬರೆಯುವುದು. ಮೊದಲು ತಾಳೆ ಪತ್ರ ಬಂದಾದ್ಮೇಲೆ ತಾಳೆ ಪತ್ರದಂತೆಯೇ ಇದನ್ನು ಮಾಡಿರುವುದು. ಇದನ್ನು ಕೋರ ಬಟ್ಟೆಯನ್ನು ಬಿಟ್ಟು ಬೇರೆ ಬಟ್ಟೆಯಲ್ಲಿ ಇದನ್ನು ಸ್ವಚ್ಛಗೊಳಿಸುವ ಹಾಗಿಲ್ಲ, ಅದರಲ್ಲಿಯೇ ಮಾಡಬೇಕು.

**ಪುರಾತನ ತಾಳೆಗರಿಗಳು**

ಮೈಸೂರಿನ ಮೊದಲನೆ ಗ್ರಂಥಾಲಯ 'ಪ್ರಾಚ್ಯವಿದ್ಯಾ ಸಂಶೋಧನಾಲಯ'. ಇದು 1891 ರಲ್ಲಿ ಚಾಮರಾಜ ಒಡೆಯರ್ ಸ್ಥಾಪನೆ ಮಾಡಿದರು. ಅತಿ ಹೆಚ್ಚು ತಾಳೆಗರಿ ತಮಿಳುನಾಡಿನ ತಾಂಜಾ ಎಂಬ ಊರಿನಲ್ಲಿ ಸಿಕ್ಕಿವೆ. ಈ ತಾಳೆಗರಿಯನ್ನು ಥೈಮೋಯಿಲ್ ಅಥವಾ ಡೈಕ್ಲೋರೋಬೆಂಜನೆ ಎಂಬ ಎಣ್ಣೆಯಿಂದ ಹದಿನೈದು ದಿನಕ್ಕೊಮ್ಮೆ ಇದನ್ನು ಸ್ವಚ್ಛಗೊಳಿಸಿ ಎಣ್ಣೆಯನ್ನು ಹಚ್ಚಲಾಗುವುದು. ಇದರಲ್ಲಿ 'ಕಡತ' ಅಕೌಂಟ್ಸ್ ಬುಕ್ ಎಂಬುದನ್ನು ಸಹ ಬರೆದಿದ್ದಾರೆ ಹಾಗೂ ಇದರಲ್ಲಿ 'ವೇದಗಳು' ಎಂಬುದು ಹಾಗೂ 'ಮಸಿ ಹಚ್ಚಿರುವ ಹಸ್ತ ಪತ್ರಿಕೆಗಳು' ವಿವಿಧ ಲಿಪಿಯ ತಾಳೆಗರಿಗಳು ಹಾಗೂ ಮರದ ಪಟ್ಟಿ ಲ್ಯಾಮಿನೇಷನ್ ಮಾಡಿದ್ದು, ಇತ್ತೀಚಿನ ಕಾಗದದ ಹಸ್ತ ಪತ್ರಿಕೆಗಳು ಎಚ್.ಆರ್.ಡಿ. ಸ್ಕ್ಯಾನ್ ಆ್ಯಂಡ್ ಪ್ರಿಂಟ್ ಮತ್ತು ಖಾಲಿ ಪತ್ರಗಳು ಮತ್ತು 'ಖರಾತಲ' ಹಾಗೂ 'ಭೈಷಜಕಲ್ಪ', ಕೌಟಿಲ್ಯನ ಅರ್ಥಶಾಸ್ತ್ರ ಮತ್ತು ಬೂರ್ಜಪತ್ರ ಮತ್ತೊಂದು ವಿಷ್ಣುವಿನ ದಶಾವತಾರ 'ಕಡತ' ಹಾಗೂ ತಾಳೆಗರಿಗಳನ್ನು ಸ್ವಚ್ಛಗೊಳಿಸಲು ಬೇಕಾಗುವ ಸಾಮಗ್ರಿಗಳು;

- ➢ ಮೃದುವಾದ ಬ್ರಷ್
- ➢ ಕೋರ ಬಟ್ಟೆ
- ➢ ಲೆಮೊಗ್ರೋಸ್‌ಎಣ್ಣೆ

ಇವು ತಾಳೆಗರಿಗಳನ್ನು ಸ್ವಚ್ಛಗೊಳಿಸಲು ಬೇಕಾಗುವ ವಸ್ತುಗಳಾಗಿವೆ.

ಇವುಗಳನ್ನು ಹಾಗೆ ಇಟ್ಟರೆ ಕಲೆ ಮತ್ತು ಹುಳುಗಳು ಬೇಗನೆ ಬರುತ್ತವೆ. ತಾಳೆಗರಿಗಳನ್ನು ಕತ್ತಲೆಯ ರೂಮಿನಲ್ಲಿ ಇಡುವುದು ಅತ್ಯಂತ ಸುರಕ್ಷತೆಯಾಗಿದೆ. ನಂಬರ್‌ಗಳ ಆಧಾರದ ಮೇಲೆ ಲಿಪಿಗಳನ್ನು ಸ್ವಚ್ಛತೆಯ ನಂತರ ಜೋಡಿಸಲಾಗುವುದು. ನಂಬರ್ ಆಧಾರದ ಮೇಲೆ ಇದನ್ನು ಜೋಡಿಸಿರುತ್ತಾರೆ. ತಾಳೆಗರಿಗಳ ಜೊತೆ

**ಪು.ತಿ.ನೋ.**



ಬೇವಿನ ಎಲೆಯನ್ನು ಸಹ ತೆಗೆದು ಇಟ್ಟಿದ್ದಾರೆ. ಮೈಸೂರಿನ ಪ್ರಾಚ್ಯವಿದ್ಯ ಸಂಶೋಧನಾಲಯದಲ್ಲಿ ಒಟ್ಟಾರೆಯಾಗಿ 14 ಸಾವಿರಕ್ಕೂ ಹೆಚ್ಚಿನ ತಾಳೆಗರಿಗಳು ಕಂಡುಬರುತ್ತವೆ ಎಂದು ತಿಳಿಸಿದ್ದಾರೆ. ಇದನ್ನು 'ಆರ್ಕಿಯಾಲಜಿ'ಯವರು ಸ್ವತಃತಾವೇ ಬಂದು ಸ್ವಚ್ಛಗೊಳಿಸುವರು. ಇವುಗಳನ್ನು ಇತಿಹಾಸದ ಗುಂಪಿನವರು ಹೊಸ ಹೊಸ ತಾಳೆಗರಿಗಳನ್ನು ಪತ್ತೆ ಹಚ್ಚುವುದು ಹಾಗೂ ಇತ್ತೀಚೆಗೆ ಯಾವುದೇ ತಾಳೆಗರಿಗಳು ಸಿಕ್ಕಿಲ್ಲ ಎಂಬುದಾಗಿಯೂ ತಿಳಿಸಿದರು. ಇದನ್ನು ಥೈಮೋಯಿಲ್ ಮತ್ತು ಡೈಕ್ಲೋರೋ ಬೆಂಜೆನ್ ಆಯಿಲ್‌ನಿಂದ 15 ದಿನ ಮತ್ತೊಮ್ಮೆ ಸ್ವಚ್ಛ ಮಾಡಿ 'ರೆಡ್‌ಕ್ಲೋಡ್' ನಿಂದ, ಸಂರಕ್ಷಿಸಲಾಗುತ್ತದೆ. ಇದರಿಂದ ತಾಳೆಗರಿಗಳು ದೀರ್ಘಕಾಲ ಬಾಳಿಕೆ ಬರುತ್ತವೆ.

**– ಮಂಚಣ್ಣ ಎಸ್.**
ಪ್ರಥಮ ಬಿ.ಎ.

# Visited to Oriental Research Institute, Mysuru-07.1.2022









# Visited to Historical Place Veeranagere, Mysuru-10.1.2022


















ಆಂದೋಲನ

# ವೀರನಗೆರೆಯ ಇತಿಹಾಸ ಪರಿಚಯಿಸಿಕೊಂಡ ಚಿಣ್ಣರು

## 'ವೀರನಗೆರೆಯ ಐತಿಹಾಸಿಕ ಪರಂಪರೆಯ ಪ್ರಾತ್ಯಕ್ಷಿಕೆ' ಕಾರ್ಯಕ್ರಮ

ಮೈಸೂರು: ಮೈಸೂರಿನ ಇತಿಹಾಸ ಆರಂಭವಾಗುವುದೇ ವೀರನಗೆರೆಯಿಂದ. ಯದುವಂಶದ ಅರಸರಿಗಾಗಿ, ಮೈಸೂರಿಗಾಗಿ ತಮ್ಮ ಪ್ರಾಣವನ್ನೇ ಅರ್ಪಿಸಿದ ವೀರನಗೆರೆಯವರ ಚರಿತ್ರೆ ಅಜರಾಮರ ಎಂದು ಕರಾಮುವಿ ಪ್ರಾಚೀನ ಇತಿಹಾಸ ವಿಭಾಗದ ಮುಖ್ಯಸ್ಥರಾದ ಡಾ.ಶೆಲ್ವಪಿಳ್ಳೈ ಅಯ್ಯಂಗಾರ್ ಹೇಳಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಮೈಸೂರು ವಿವಿ, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮಹಾಜನ ಪ್ರಥಮ ದರ್ಜೆ ಕಾಲೇಜು, ಮಹಾರಾಣಿ ಕಲಾ ಕಾಲೇಜು, ಅರಿವು ಶಾಲೆ ವತಿಯಿಂದ ಸೋಮವಾರ ವೀರನಗೆರೆಯಲ್ಲಿ ಹಮ್ಮಿಕೊಂಡಿದ್ದ 'ವೀರನಗೆರೆಯ ಐತಿಹಾಸಿಕ ಪರಂಪರೆಯ ಪ್ರಾತ್ಯಕ್ಷಿಕೆ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮೂಲ ಪರಪಂಪರೆಯನ್ನು ಕೇವಲ ಪುಸ್ತಕದಲ್ಲಿ ಹೇಳಿದರೆ ಸಾಲುವುದಿಲ್ಲ. ವಿದ್ಯಾರ್ಥಿಗಳನ್ನು ನೇರವಾಗಿ ಸ್ಥಳಕ್ಕೆ



ಕರೆದೊಯ್ದು ಆ ಸ್ಥಳದ ಸಂಸ್ಕೃತಿ, ಮಹತ್ವವನ್ನು ಪರಿಚಯಿಸಿಕೊಡಬೇಕು. ಆಧುನಿಕತೆಯ ಭರಾಟೆಯಲ್ಲಿ ನಮ್ಮ ಸಂಸ್ಕೃತಿಯ ಪ್ರತೀಕಗಳಾದಂತಹ ವೀರಗಲ್ಲು, ಮಾಸ್ತಿಗಲ್ಲು, ಶಾಸನಗಳು, ಸ್ಮಾರಕಗಳು ಮಾನವನ ಹಸ್ತಕ್ಷೇಪದಿಂದ ನಾಶವಾಗುತ್ತಿವೆ. ಇವುಗಳ ಬಗ್ಗೆ ಮಕ್ಕಳಲ್ಲಿ ಜಾಗೃತಿ ಮೂಡಿಸಬೇಕು ಎಂದು ತಿಳಿಸಿದರು.

ಕರಾಮುವಿ ಡೀನ್ ಪ್ರೊ.ಅಶೋಕ್ ಕಾಂಬ್ಳೆ ಮಾತನಾಡಿದರು. ಇದೇ ವೇಳೆ ಅರಿವು ಶಾಲೆ ವತಿಯಿಂದ ಹೊರತರಲಾಗುತ್ತಿರುವ 'ಅಂಗಳ' ಮಾಸಪತ್ರಿಕೆಯನ್ನು ಬಿಡುಗಡೆ ಮಾಡಲಾಯಿತು. ಮೈಸೂರು ವಿವಿ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ.ಕೆ.ಪ್ರಭು, ಸಂತೋಷ್ ನಾಯಕ್, ಪುರಾತತ್ವ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ.ಸಿ.ಎನ್. ಮಂಜುಳ, ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್.ಶ್ರೀಧರ್, ಅರಿವು ಸಂಸ್ಥೆಯ ಜನಾರ್ಧನ್, ವೀರನಗೆರೆ ಗ್ರಾಮದ ಮುಖಂಡರಾದ ಆರ್.ಶ್ರೀನಿವಾಸ್, ಎಂ.ನಾರಾಯಣಪ್ಪ, ಜಿ.ಶಂಕರ್, ಎ.ಆರ್. ನಂದೀಶ್, ಜಿ.ಆರ್.ಡಾ.ಮಂಜುನಾಥ್, ಡಾ.ಎಸ್.ರವಿಪ್ರಸಾದ್, ಡಾ.ಪಿ.ಕೆ. ಅಂಜನಮೂರ್ತಿ ಭಾಗವಹಿಸಿದ್ದರು.

### ಮಕ್ಕಳಿಗೆ ಮಹದೇವಮ್ಮನ ದೇವಸ್ಥಾನ ಪರಿಚಯ


ಮೈಸೂರು: ವಿದ್ಯಾರ್ಥಿಗಳನ್ನು ಮಹದೇವಮ್ಮನ ದೇವಸ್ಥಾನಕ್ಕೆ ಕರೆದೊಯ್ದು ವೀರನಗೆರೆ ಜನರ ಸಾಹಸಗಳು, ಅಲ್ಲಿ ಇನ್ನೂ ನಡೆದುಕೊಂಡು ಬರುತ್ತಿರುವ ಆಚಾರ ವಿಚಾರಗಳ ಬಗ್ಗೆ ಮಾಹಿತಿ ನೀಡಲಾಯಿತು. ದೇವಾಲಯದ ಸುತ್ತ ಇರುವ ವೀರಗಲ್ಲು ಹಾಗೂ ಮಹಾಸತಿಕಲ್ಲಿನ ಇತಿಹಾಸದ ಬಗ್ಗೆ ವಿದ್ಯಾರ್ಥಿಗಳಿಗೆ ವಿವರಿಸಲಾಯಿತು.

Main Edition
Jan 11 2022 Page No. 2
Powered by : eReleGo.com



# Release of 'Kadamba' Newletter -14.1.2022





ಶಿಕ್ಷಣದಿಂದ ಶ್ರೇಷ್ಠತೆ

**ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜು (ಸ್ವಾಯತ್ತ)**

ಜಯಲಕ್ಷ್ಮೀಪುರಂ, ಮೈಸೂರು–12

ಶ್ರೇಷ್ಠತೆಯ ಸಾಮರ್ಥ್ಯವುಳ್ಳ ಕಾಲೇಜು

**ಇತಿಹಾಸ ವಿಭಾಗ**

**Dept. of History**

**ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಯೋಜನೆಗೊಂಡು, ನ್ಯಾಕ್‌ನಿಂದ 'ಎ' ಮಾನ್ಯತೆ ಪಡೆದಿದೆ.**





ಸಂಚಿಕೆ: 33 ಜೂನ್ 2022 | ಪ್ರಧಾನ ಸಂಪಾದಕರು: ಡಾ. ಬಿ.ಆರ್. ಜಯಕುಮಾರಿ, ಪ್ರಾಂಶುಪಾಲರು | www.mahajanafgc.com | ಸಂಪಾದಕರು: ಡಾ.ಶ್ರೀಧರ ಹೆಚ್, ಇತಿಹಾಸ ವಿಭಾಗ | ಪುಟಗಳು: 08

## ಸಂಪಾದಕೀಯ

# ಪ್ರಮಾಣಿಕತೆಯ ಪ್ರವಾದಿ

### ದಿ. ಕಡಿದಾಳ್ ಮಂಜಪ್ಪ



ಅಂದೂ ಅವರು ತಿರಸ್ಕರಿಸಿದ ಪ್ಯಾಲೇಸ್ ಗ್ರೌಂಡಿನ ಆ ಒಂದು ಎಕರೆ ಭೂಮಿ ಬೆಲೆ ನೂರಾರು ಕೋಟಿ.

ಮುಖ್ಯಮಂತ್ರಿಯಂತಹ ರಾಜ್ಯದ ಅತ್ಯುನ್ನತ ಅಧಿಕಾರ ಸ್ಥಾನದಿಂದ ಹೊರ ಬಂದಿರುತ್ತಾರೆ. ವೈಭವೋಪೇತ ಬಂಗಲೆಯಿಂದ ಬೆಂಗಳೂರಿನ ಆಂಡ್ರಿರಸ್ತೆಯಲ್ಲಿರುವ ಬಾಡಿಗೆ ಮನೆಗೆ ಬಂದಿದ್ದ ಸಮಯ. ತಮ್ಮ ಜೀವನೋಪಾಯಕ್ಕಾಗಿ ಮತ್ತೆ ಕರಿಕೋಟು ಹಾಕಿ ಹೈಕೋರ್ಟಿನ ಲಾಯರ್ ಆಗಿ ಹೋಗುತ್ತಿರುತ್ತಾರೆ. ಸಮರ್ಥ ಲಾಯರ್ ಆಗುವಲ್ಲಿ ದಾಪುಗಾಲಿಡುತ್ತಾ ಮುಂದುವರಿಯುತ್ತಿರುವಾಗ ಮುಖ್ಯಮಂತ್ರಿಯಂತಹ ಅತ್ಯುನ್ನತ ಹುದ್ದೆ ಹೊಂದಿದವರು ಮತ್ತೆ ಲಾಯರ್‌ಗಿರಿ ಮಾಡುವ ಬಗ್ಗೆ ಇವರ ಹಿತೈಷಿಗಳನೇಕರು ಅಪಸ್ವರ ಎತ್ತಿದರೂ ಜೀವನೋಪಾಯಕ್ಕಾಗಿ ಮನೆ ಆಸ್ತಿ ಮಾಡಿಕೊಳ್ಳದೆ ಕೇವಲ ಪ್ರಾಮಾಣಿಕತೆಯನ್ನೇ ಮೈತುಂಬಾ ಹೊದ್ದುಕೊಂಡಿದ್ದ ಈ ಪ್ರವಾದಿಗೆ ಲಾಯರಾಗಿ ಪ್ರಾಕ್ಟೀಸ್ ಮಾಡುವುದು ಅವಮಾನವೆನಸಲಿಲ್ಲ. ಮುಖ್ಯಮಂತ್ರಿ ಆದವನೊಬ್ಬ ಮತ್ತೆ ತನ್ನ ಹಿಂದಿನ ವೃತ್ತಿಗೆ ಮರಳಿದ ಘಟನೆ ಭಾರತದಂತಹ ದೇಶದಲ್ಲಿ ಬಹು ಅಪರೂಪವೇ ಸರಿ.

ಒಂದು ಸಂಜೆ ಒಳಕೋಣೆಯ ಬಾಗಿಲು ಹಾಕಿಕೊಂಡು ತಮ್ಮ ಕಕ್ಷಿದಾರರೊಂದಿಗೆ ಚರ್ಚೆ ಮಾಡುತ್ತಿದ್ದಾರೆ. ಹೊರಗಡೆ ಆಡುತ್ತಿದ್ದ ಇವರ ಮಕ್ಕಳಿಬ್ಬರು ಓಡೋಡಿ ಒಳಗಡೆ ಬಂದು ಯಾರೋ ವಿಶ್ವೇಶರಯ್ಯ ಎಂಬುವರು ನಿಮ್ಮನ್ನು ನೋಡಲು ಬಂದಿದ್ದಾರೆ. ಎಂದಾಗ ಇವರ ಪರಿಚಿತರಾಗಿದ್ದ ತಾಲೂಕು ಮ್ಯಾಜಿಸ್ಟ್ರೇಟ್ ಆಗಿದ್ದ ವಿಶ್ವೇಶ್ವರಯ್ಯ ಇರಬೇಕೆಂದು ತಿಳಿದು ಅರ್ಧ ಗಂಟೆ ಕಾಯಲು ಹೇಳುತ್ತಾರೆ. ಒಳಗಡೆಯಿಂದ ಮಕ್ಕಳು ಹಾಗೇ ಹೊರಗಿದ್ದ ವ್ಯಕ್ತಿಗೆ ಹೇಳುತ್ತಾರೆ. ಸ್ವಲ್ಪ ಹೊತ್ತಿನ ನಂತರ ಹೊರಗೆ ಬಂದು ಮಂಜಪ್ಪನವರು ನೋಡುತ್ತಾರೆ! ನೋಡುವುದೆಂತ? ಸರ್‌ಎಂ.ವಿಶ್ವೇಶ್ವರಯ್ಯನವರೇ ಬಂದಿದ್ದಾರೆ. ಇವರನ್ನು ಇಷ್ಟು ಹೊತ್ತು ಕಾಯಿಸಿದ್ದರ ಬಗ್ಗೆ ಸಂಪೂರ್ಣ ಕುಗ್ಗಿ ಹೋಗುತ್ತಾರೆ.

ಅತೀವ ನಾಚಿಕೆಯಿಂದ ವಿಶ್ವೇಶ್ವರಯ್ಯನವರ ಕ್ಷಮೆಯಾಚಿಸುತ್ತಾರೆ. ಆಗ ವಿಶ್ವೇಶ್ವರಯ್ಯನವರು "ನಾನೊಬ್ಬ ನಿವೃತ್ತ ವ್ಯಕ್ತಿ, ನನಗೇನೂ ಕೆಲಸವಿಲ್ಲ, ನಿಮ್ಮನ್ನು ನೋಡುವುದಕ್ಕಾಗಿಯೇ ಬಂದಿದ್ದೇನೆ. ನಿಮ್ಮ ಸಮಯಕ್ಕಾಗಿ ಕಾಯುವುದು ನನ್ನ ಕರ್ತವ್ಯ" ಎನ್ನುತ್ತಾರೆ.

ತಿಂಗಳಿಗೊಮ್ಮೆಯಾದರೂ ಇವರಿರುವ ಆಂಡ್ರಿ ರಸ್ತೆಯ ಮನೆಗೆ ವಿಶ್ವೇಶ್ವರಯ್ಯನವರು ಹುಡುಕಿಕೊಂಡು ಬರುತ್ತಿದ್ದರು. ಹೀಗೆ ಬರುವ ಶ್ರಮ ತೆಗೆದು ಕೊಳ್ಳಬಾರದೆಂದೂ, ಫೋನ್ ಮಾಡಿದರೆ ತಾನೇ ನೀವಿರುವಲ್ಲಿಗೆ ಬಂದು ನಿಮ್ಮನ್ನು ನೋಡುತ್ತೇನೆಂದು ವಿಶ್ವೇರಯ್ಯನವರಲ್ಲಿ ಕೇಳಿಕೊಳ್ಳುತ್ತಾರೆ.

ಆಗ ವಿಶ್ವೇಶ್ವರಯ್ಯನವರು ಹೇಳುವ ಮಾತು ಕೇಳಿದರೆ ಕಡಿದಾಳು ಮಂಜಪ್ಪನವರ ಪ್ರಾಮಾಣಿಕತೆಯ ಕಾಠಿಣ್ಯ ಎಷ್ಟು ಜಗತ್ಪ್ರಸಿದ್ಧ ಎಂಬ ಅರಿವು ಮೂಡಿಸುತ್ತದೆ. "ಬಹಳ ವರ್ಷಗಳ ನಂತರ ಮೈಸೂರುರಾಜ್ಯದಲ್ಲಿ ನಾನೊಬ್ಬ ಒಳ್ಳೆಯ ಪ್ರಾಮಾಣಿಕ ವ್ಯಕ್ತಿಯನ್ನು ಗುರುತಿಸಿದ್ದೇನೆ. ಅದಕ್ಕಾಗಿ ನಿಮ್ಮ ಮನೆಗೆ ಸ್ಫೂರ್ತಿ ಪಡೆಯಲು ಬರುತ್ತೇನೆ" ಎನ್ನುತ್ತಾರೆ.

1957ರ ಕೊನೆಯ ದಿನಗಳಲ್ಲಿ ನಡೆದ ಮತ್ತೊಂದು ಘಟನೆ. ಅಂದಿನ ರಾಜ್ಯಪಾಲರಾಗಿದ್ದವರು. ಮಹಾರಾಜರಾದ ಜಯಚಾಮರಾಜ ಒಡೆಯರ್‌ರವರು. ಅವರು ಮೈಸೂರಿನಂದ ಬೆಂಗಳೂರಿಗೆ ಬಂದವರು. ಬೆಂಗಳೂರು ಅರಮನೆಯಲ್ಲಿ ಉಳಿದುಕೊಂಡಿದ್ದಾಗ ಅವರನ್ನು ನೋಡಲು ಮಂಜಪ್ಪನವರು ಬೆಂಗಳೂರು ಪ್ಯಾಲೇಸ್‌ಗೆ ಹೋಗುತ್ತಾರೆ.

ಕುಶಲೋಪರಿಗಳನ್ನು ಮುಗಿಸಿ ಹೊರಬರುವಾಗ ಅವರ ಹಿಂದಯೇ ಮಹಾರಾಜರ ಕಾರ್ಯದರ್ಶಿಯಾಗಿದ್ದ ಮಹದೇವಯ್ಯನವರು ಬಂದು ಬೆಂಗಳೂರು ಅರಮನೆಗೆ ಸೇರಿರುವ ಪ್ಯಾಲೇಸ್ ಆರ್ಕಿಡ್ಸ್‌ನ ಒಂದು ಎಕರೆ ಭೂಮಿಯನ್ನು ನಿಮ್ಮ

ಮು.ತಿ.ನೋ.



ಹೆಸರಿಗೆ ಮಾಡಿಕೊಡಲು ಮಹಾರಾಜರು ಬಯಸಿದ್ದಾರೆ. ನೀವು ಇದನ್ನು ತೆಗೆದುಕೊಂಡರೆ ಮುಂದಿನ ದಿನಗಳಲ್ಲಿ ತಮಗೆ ಅನುಕೂಲವಾಗುತ್ತದೆ ಎಂಬ ಸಂದೇಶವನ್ನು ಕಡಿದಾಳರಿಗೆ ಕೊಡುತ್ತಾರೆ.

ಆದರೆ ಅದಕ್ಕುತ್ತರವಾಗಿ ಮಹಾರಾಜರ ಔದಾರ್ಯಕ್ಕೆ ಕೃತಜ್ಞತೆಗಳನ್ನೂ ಹೇಳಿ ಮಹಾರಾಜರ ಧಾರಾಳತನವನ್ನು ದುರುಪಯೋಗ ಪಡಿಸಿಕೊಳ್ಳಬಾರದೆಂಬ ಉದ್ದೇಶದಿಂದ ಭೂಮಿಯ ಅಗತ್ಯ ತನಗಿಲ್ಲ ಎಂದು ಹೇಳಿ ಮಹಾರಾಜರ ಔದಾರ್ಯವನ್ನು ತಿರಸ್ಕರಿಸುತ್ತಾರೆ.

ಆಗ ಮಾಜಿ ಮುಖ್ಯಮಂತ್ರಿ ಮಂಜಪ್ಪನವರ ಹತ್ತಿರ ಒಂದು ಸೈಟೂ ಸಹಾ ಇರದೆ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಆ ಒಂದು ಎಕರೆ ಭೂಮಿಯ ಬೆಲೆ ಈಗ ನೂರಾರು ಕೋಟಿಗಳಾಗಿರಬಹುದು ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಕವಿ ಮತ್ತು ಚಿಂತಕ ಎಲ್. ಸಿ. ನಾಗರಾಜ್ ಆಗ ಬೆಂಗಳೂರಿನ ಕಾಲೇಜೊಂದರಲ್ಲಿ ಎಂಜಿನಿಯರಿಂಗ್ ವಿದ್ಯಾರ್ಥಿ. ತಮ್ಮ ಕಾಲೇಜಿನ ಕಾರ್ಯಕ್ರಮವೊಂದಕ್ಕೆ ಇವರನ್ನು ಮುಖ್ಯ ಅತಿಥಿಯನ್ನಾಗಿ ಆಹ್ವಾನಿಸಲು ಇವರ ಆಂಡ್ರಿ ರಸ್ತೆಯಲ್ಲಿರುವ ಮನೆಗೆ ಗೆಳೆಯರೊಂದಿಗೆ ಹೋಗುತ್ತಾರೆ.

ಬಿಳಿಯ ನಿಕ್ಕರ್ ಮತ್ತು ಬನಿಯನ್ ಹಾಕಿಕೊಂಡ ವ್ಯಕ್ತಿಯೋರ್ವರು ಅಂಗಳದಲ್ಲಿರುವ ಗಿಡಗಳಿಗೆ ನೀರುಣಿಸುತ್ತಿರುತ್ತಾರೆ. “ಯಾರನ್ನು ನೋಡಬೇಕಿತ್ತು” ಎಂಬ ಪ್ರಶ್ನೆ ಆ ವ್ಯಕ್ತಿಯಿಂದ ಬಂದಾಗ “ಕಡಿದಾಳರನ್ನು ನೋಡಲು ಬಂದಿದ್ದೇವೆ” ಎನ್ನುತ್ತಾರೆ.

ಸರಿ ಕರೆಯುತ್ತೇನೆ ಎಂದು ಒಳಹೋದ ವ್ಯಕ್ತಿಯೇ ಕಡಿದಾಳರಾಗಿ ಪಂಚೆ ಮತ್ತು ಜುಬ್ಬದೊಂದಿಗೆ ಹೊರ ಬಂದಾಗ ಎಲ್.ಸಿ. ನಾಗರಾಜ್ ಮತ್ತು ಗೆಳೆಯರಿಗೆ ಒಂದುಕ್ಷಣ ಮಾತೇ ಹೊರಡಲಿಲ್ಲ.

ಇವರ ತೊಳಲಾಟವನ್ನು ಅರ್ಥ ಮಾಡಿಕೊಂಡ ಕಡಿದಾಳರೇ ಮುಂದುವರಿದು “ಏನೀಗ ನಿಮ್ಮ ಕಾರ್ಯಕ್ರಮಕ್ಕೆ ಬರಬೇಕಲ್ಲವೆ? ಚಿಂತೆ ಮಾಡಬೇಡಿ ಖಂಡಿತ ಬರುತ್ತೇನೆ” ಎಂದು ಹೇಳಿ ಅವರನ್ನು ಕಳುಹಿಸಿ ಕೊಟ್ಟಿದ್ದನ್ನು ಮೊನ್ನೆ ಎಲ್.ಸಿ. ಅವರ ಫೇಸ್ ಬುಕ್ ಬರಹದಲ್ಲಿ ಗಮನಿಸಿದೆ.

ರಾಜಕಾರಣದಲ್ಲಿನ ಅನೇಕ ಘಟನೆಗಳನ್ನು ರಸವತ್ತಾಗಿ ಬರೆದು ಬೆರಗು ಗೊಳಿಸುವ ಜನಪರ ಪತ್ರಕರ್ತ ಮಿತ್ರ ಆರ್.ಟಿ. ವಿಠಲಮೂರ್ತಿ ಅವರು ಸದಾಶಿವ ನಗರದ ಕಡಿದಾಳರ ಮನೆಗೆ ಹೋಗುತ್ತಾರೆ. ಸಾಮಾನ್ಯವಾಗಿ ಸಕ್ರಿಯ ರಾಜಕಾರಣದ ಬಗ್ಗೆ ಅಷ್ಟೇನೂ ತಲೆಕೆಡಿಸಿಕೊಳ್ಳದೆ ತಮ್ಮ ಪಾಡಿಗೆ ತಾವಿದ್ದ ಕಡಿದಾಳರನ್ನು ಮಾತಾಡಿಸತೊಡಗುತ್ತಾರೆ.

ಅಪರೂಪದ ವಿಷಯಗಳನ್ನು ಹೆಕ್ಕಿ ತೆಗೆವ ಕಲೆಯಲ್ಲಿ ವಿಠಲಮೂರ್ತಿಯವರಂತವರು ಪ್ರಸಕ್ತ ಸನ್ನಿವೇಶದಲ್ಲಿ ಕಡಿಮೆ ಪ್ರಮಾಣದಲ್ಲಿದ್ದಾರೆಂಬುದು ನನ್ನ ಭಾವನೆ. ಅದೂ ಇದೂ ಮಾತಾಡುತ್ತಾ ಕಡಿದಾಳರಿಗೆ ತಮ್ಮ ಜೀವನದಲ್ಲಿ ತಮ್ಮ ಮೇಲೆ ಪರಿಣಾಮ ಬೀರಿದ ಬಹು ಮುಖ್ಯವಾದ ಘಟನೆಯೊಂದನ್ನು ಹೇಳಲು ವಿನಂತಿಸುತ್ತಾರೆ.

ಐವತ್ತರ ದಶಕದ ಆರಂಭದಲ್ಲಿ ಮಂತ್ರಿಯಾಗಿದ್ದ ಕಡಿದಾಳರ ಕಾರು ಬೆಂಗಳೂರಿನಿಂದ ಹೊರಡುತ್ತದೆ. ಹಳ್ಳಿಯೊಂದರ ಹತ್ತಿರ ಕಾರು ಬಂದಾಗ ತಲೆ ಬಿಚ್ಚಿಕೊಂಡ, ಮಾಸಲು ಸೀರೆಯುಟ್ಟ ಮಹಿಳೆಯೊಬ್ಬಳು ಇವರ ಕಾರನ್ನು ತಡೆದು ಗಳ ಗಳನೆ ಅಳ ತೊಡಗುತ್ತಾಳೆ.

ಕಾರು ನಿಲ್ಲಿಸಿದ ಮಂಜಪ್ಪನವರಿಗೆ ವಿಷಯವೇನೆಂಬುದೇ ಅರ್ಥವಾಗದು. ಮಂಜಪ್ಪನವರನ್ನುದ್ದೇಶಿಸಿ ಆ ಮಹಿಳೆ “ನೀನು ಮಂಜಪ್ಪ. ದೊಡ್ಡ ಹುದ್ದೆಯಲ್ಲಿದ್ದೀಯ. ಸಾಹುಕಾರರ ಭೂಮಿಯನ್ನು ಉಳುಮೆ ಮಾಡುತ್ತೇವೆ. ಬಂದ ಬೆಳೆ ಪೂರಾ ಗೇಣಿಗೆ ಹೋಗುತ್ತಿದೆ. ಅರ್ಧ ಹೊಟ್ಟೆಯಲ್ಲಿ ನನ್ನ ಮಗ ಸತ್ತೇ ಹೋದ. ನನ್ನ ಗಂಡ ರೋಗ ಹಿಡಿದು ಮೂಲೆ ಸೇರಿದ್ದಾನೆ. ಅವನೂ ಇವತ್ತೋ ನಾಳೆಯೋ ಸಾಯುವ ಹಂತದಲ್ಲಿದ್ದಾನೆ. ನಮ್ಮ ಊರಿನ ಎಲ್ಲರ ಸ್ಥಿತೀನು ಇದೇ ರೀತಿ. ಇದಕ್ಕೆ ಏನಾದರೊಂದು ಪರಿಹಾರ ಕಂಡು ಹಿಡಿಯಪ್ಪಾ. ಹೆಂಗಾದ್ರು ನಮ್ಮನ್ನು ಬದುಕಿಸು” ಎಂದು ಗೋಳೋ ಎಂದು ಅಳುತ್ತಿದ್ದಾಗ ಮಂಜಪ್ಪನವರ ಕರುಳೇ ಹೊರ ಬಂದಂತಾಗುತ್ತದೆ.

ಆ ಮಹಿಳೆಯ ಆಕ್ರಂದನ ಗೇಣಿ ವ್ಯವಸ್ಥೆಯ ಕರಾಳತೆಯನ್ನು ಬಿಂಬಿಸ ತೊಡಗುತ್ತದೆ. ಆ ಹಳ್ಳಿಯ ಜನರ ಸ್ಥಿತಿಗತಿ ಮಂಜಪ್ಪನವರ ಮನಸ್ಸಿನ ಮೇಲೆ ತೀವ್ರ ಪರಿಣಾಮ ಉಂಟು ಮಾಡುತ್ತಾ ಹೋಗುತ್ತದೆ. ಅಲ್ಲಿಂದ ಮಂಜಪ್ಪನವರ ಕಾರ್ಯಾಚರಣೆಗಳು ಗೇಣಿ ಶಾಸನ ತರುವುದರತ್ತ ಹೋಗುವುದನ್ನು ವಿವರಿಸಿ ಹೇಳಬೇಕಿಲ್ಲ. ಸಾರ್ವಜನಿಕ ಕ್ಷೇತ್ರಕ್ಕೆ ಕಾಲಿಟ್ಟ ಮೇಲೆ ತಮ್ಮ ಹೆಸರಿನ ಜೊತೆ ಸೇರಿಕೊಂಡ ಜಾತಿ ಸೂಚಕ ಗೌಡ ಎಂಬ ಪದವನ್ನು ತಾವು ಮಾತ್ರ ತೆಗೆದು ಹಾಕಲಿಲ್ಲ.

ತಮ್ಮ ಸಹೋದರರುಗಳಾದ ತಮ್ಮಯ್ಯ, ಅಣ್ಣಯ್ಯ, ನಾಗಪ್ಪ, ಶ್ರೀನಿವಾಸ್ ಇವರುಗಳ ಹೆಸರಿನಲ್ಲಿ ಸೇರಿಕೊಂಡಿದ್ದ ಗೌಡ ಎಂಬ ಪದವನ್ನು ಆ ಕಾಲದಲ್ಲೇ ಇವರುಗಳೆಲ್ಲ ತೆಗೆದು ಹಾಕಿರುವುದನ್ನು ಸಹಾ ಗಮನಿಸಬೇಕಾದ ಅಂಶ. ನಮ್ಮ ಹಳ್ಳಿಯಲ್ಲಿ ಇಂದಿಗೂ ಮಂಜಪ್ಪಗೌಡ ಎಂದೇ ಕರೆಯುತ್ತಿರುವುದನ್ನು ಕಾಣಬಹುದು. ಇಂತಹ ಆಲೋಚನೆ ಅಂದೇ ಇವರಿಗೆ ಸಂಗತಿಯಾಗಿದೆ.

ಇದು ಸತ್ಯ ಮತ್ತು ಪ್ರಾಮಾಣಿಕತೆಯ ಪ್ರವಾದಿಯ ನೈಜಕಥನ ಒಂದಷ್ಟು ನೆನಪುಗಳು. ಇಂತಹ ಮಹಾನೀಯರು ಮತ್ತೆ ಮತ್ತೆ ಈ ನಾಡಿನಲ್ಲಿ ಹುಟ್ಟಿಬರಲಿ ಇಲ್ಲವೇ ಸಾರ್ವಜನಿಕ ಜೀವನದಲ್ಲಿ ಇರುವ ವ್ಯಕ್ತಿಗಳು ಇವರ ಬದುಕನ್ನು ಆದರ್ಶವಾಗಿ ಅನುಸರಿಸಲಿ ಎಂದು ಆಶಿಸೋಣ.

**– ಡಾ. ಶ್ರೀಧರ ಹೆಚ್.**

ಮುಖ್ಯಸ್ಥರು, ಇತಿಹಾಸ ವಿಭಾಗ



# ವಿಸ್ಮಯ ಜಗತ್ತಿನ – ಪುಸ್ತಕ ಮನೆ

ಅಂಕೆಗೌಡರು ದೈತ್ಯಾಕಾರದ ಪುಸ್ತಕ ಸಂಗ್ರಹವನ್ನು ಹೊಂದಿರುವ ಗೋಡೌನ್ ಮೂಲೆಯ ಕೋಣೆಯಲ್ಲಿ ನೆಲದ ಮೇಲೆ ಮಲಗುತ್ತಾನೆ. ಹುಟ್ಟಿನಿಂದ ರೈತನ ಮಗನಾದ 66 ವರ್ಷದ ಅಂಕೇಗೌಡ ಇಂದು ದಕ್ಷಿಣ ಭಾರತದ ಅತಿದೊಡ್ಡ ಪುಸ್ತಕ ಸಂಗ್ರಹಕಾರರಲ್ಲಿ ಒಬ್ಬರಾಗಿದ್ದಾರೆ. ಪುಸ್ತಕ ಮನೆಯಲ್ಲಿರುವ ಗೌಡರ ಪುಸ್ತಕಗಳ ಸಂಗ್ರಹವನ್ನು ವಿವರಿಸಲು 'ಸಂಗ್ರಹ' ಎಂಬುದು ಒಂದು ಸಣ್ಣ ಪದವಾಗಿದೆ. ಅವರು ಅವರ ಮೊದಲ ಕುಟುಂಬ ಮತ್ತು ಪುಸ್ತಕಗಳನ್ನು ಅವರ ಮನೆಯ ಮೂಲೆ ಮತ್ತು ಮೂಲೆಗಳಲ್ಲಿ, ಮುಖ ಮಂಟಪದಿಂದ ಅಡುಗೆ ಮನೆಯವರೆಗೆ ಕಾಣಬಹುದು. ಹಿಂದಿನ ಸಕ್ಕರೆ ಕಾರ್ಖಾನೆಯ ಕೆಲಸಗಾರ ಪುಸ್ತಕ ಸಂಗ್ರಾಹಕನಾಗಿ 30 ವರ್ಷಗಳಲ್ಲಿ ಸಂಗ್ರಹಿಸಲಾದ 15,00,000 ಲಕ್ಷ ಪುಸ್ತಕಗಳ ವೈವಿಧ್ಯಮಯ ಸಂಗ್ರಹವನ್ನು ಹೊಂದಿದೆ. ಬೆಂಗಳೂರಿನಿಂದ ಕೆಲವು ಗಂಟೆಗಳ ದೂರದಲ್ಲಿರುವ ಕರ್ನಾಟಕದ ಜಿಲ್ಲೆಯಾದ ಮಂಡ್ಯದಲ್ಲಿ ಗೌಡರು ವಾಸಿಸುತ್ತಿದ್ದಾರೆ. ಅವರ ಕಥೆಯು ನಿಜವಾಗಿಯೂ ಮಾನವ ಆತ್ಮದ ಆಳ ಮತ್ತು ಧ್ಯಾನವನ್ನು ಪ್ರತಿಬಿಂಬಿಸುತ್ತದೆ.

## ಬಾಲ್ಯದ ಉತ್ಸಾಹ

ಬಡವರ ಮನೆಯಲ್ಲಿ ಜನಿಸಿದ ಅಂಕೇಗೌಡರು ಪುಸ್ತಕಗಳು ಅವರಿಗೆ ಲಭ್ಯವಿಲ್ಲದ ಕಾರಣ ವಿಶೇಷ ಆಸಕ್ತಿಯನ್ನು ಪಡೆದರು. ಈ ಬಯಕೆಯು ಅವರ ಶಿಕ್ಷಕರಿಂದ ಪ್ರೋತ್ಸಾಹಿಸಲ್ಪಟ್ಟು ಹವ್ಯಾಸವಾಗಿ ಮಾರ್ಪಟ್ಟಿತು ಮತ್ತು ಕೆಲವೇ ವರ್ಷಗಳಲ್ಲಿ, ಗೀಳಾಗಿ ಮಾರ್ಪಟ್ಟಿತು. ಗೌಡರ ಮೆಚ್ಚಿನ ಪ್ರಾಧ್ಯಾಪಕ ಅನಂತರಾಮು ಅವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಪದವಿ ಓದುತ್ತಿದ್ದಾಗಲೇ ಪುಸ್ತಕಗಳ ಬಗ್ಗೆ ಒಲವು ಬೆಳೆಸಿಕೊಂಡರು. ವಿದ್ಯಾಭ್ಯಾಸ ಮುಗಿಸಿದ ಗೌಡರು ಮಂಡ್ಯದ ಸಕ್ಕರೆ ಕಾರ್ಖಾನೆಗೆ ಸೇರಿದರು. ಆದರೆ ಪುಸ್ತಕಗಳನ್ನು ಸಂಗ್ರಹಿಸುವ ಅವರ ಉತ್ಸಾಹವು ಕೆಲಸದಿಂದ ಕಡಿಮೆಯಾಗಲಿಲ್ಲ. "ನಾನು ಕರ್ತವ್ಯಕ್ಕೆ ಹೋದಲ್ಲೆಲ್ಲಾ ಪುಸ್ತಕಗಳನ್ನು ಖರೀದಿಸುತ್ತಿದ್ದೆ, ಅದು ನನ್ನ ಕರ್ತವ್ಯವಾಗಿತ್ತು" ಎಂದು ಅವರು ಹೆಮ್ಮೆಯಿಂದ ಒಪ್ಪಿಕೊಳ್ಳುತ್ತಾರೆ. ಮಂಡ್ಯದ ಸ್ಥಳೀಯರು ಈ ಗೀಳಿನ ಬಗ್ಗೆ ಅವರನ್ನು ಆಗಾಗ್ಗೆ ಕೀಟಲೆ ಮಾಡುತ್ತಾರೆ. ಆದರೆ ಗೌಡರು ಅದಕ್ಕೆ ನಗುತ್ತಾರೆ. ಅವರ ಪತ್ನಿ ವಿಜಯಲಕ್ಷ್ಮಿ ಅವರು ತಮ್ಮ ಪತಿ ಮನೆಗೆ ಬೇಕಾದ ಸಾಮಗ್ರಿಗಳನ್ನು ಖರೀದಿಸುವ ಹಣದಲ್ಲಿ ಪುಸ್ತಕಗಳನ್ನು ಖರೀದಿಸಿದ ಸಮಯವನ್ನು ನೆನಪಿಸಿಕೊಳ್ಳುತ್ತಾರೆ! ಒಂದು ಸಣ್ಣ ಉದಾಹರಣೆ ಆದರೂ ಮೌಲ್ಯವನ್ನು ಸಂಗ್ರಹಿಸುವ ಪುಸ್ತಕಗಳನ್ನು ಎತ್ತಿತೋರಿಸುತ್ತದೆ. ಇದನ್ನು ಮಾಡಲು ಈ ಮನುಷ್ಯನನ್ನು ಪ್ರೇರೇಪಿಸುವ ಉತ್ಸಾಹದ ಬಗ್ಗೆ ಇದು ನಿಮ್ಮನ್ನು ಆಶ್ಚರ್ಯಗೊಳಿಸುತ್ತದೆ, ಪುಸ್ತಕಗಳ ಮೇಲಿನ ಪ್ರೀತಿಯಿಂದ ಉತ್ತೇಜಿಸಲ್ಪಟ್ಟಿದೆ ಮತ್ತು ಜ್ಞಾನವನ್ನು ಹರಡುವ ಬಯಕೆಯಿಂದ ಉತ್ತೇಜಿಸಲ್ಪಟ್ಟಿದೆ.

ಗೌಡರ ಗಳಿಕೆಯ ಬಹುಪಾಲು ಆದಾಯವು ಪುಸ್ತಕಗಳನ್ನು ಖರೀದಿಸಲು ಹೋಗುತ್ತದೆ, ಅದು ಯಾವುದೇ ಪ್ರಕಾರವಾಗಿರಲಿ. ಹರಳಹಳ್ಳಿಯಲ್ಲಿರುವ ಅವರ ಪುಸ್ತಕ ಮನೆಗೆ ನಾವು ಭೇಟಿ ನೀಡಿದಾಗ, ಸಂಗ್ರಹವುಧರ್ಮ, ಭಾಳೆ ಮತ್ತು ವಿಳಯದ ನಡುವೆ ಕಡಿತಗೊಂಡಿದೆ. ಇದು 22 ವಿವಿಧ ಭಾರತೀಯ ಭಾಷೆಗಳು ಮತ್ತು 8 ವಿದೇಶಿ ಭಾಷೆಗಳನ್ನು ಒಳಗೊಂಡಿತ್ತು. 'ಪುಸ್ತಕ ಮನೆ' ಎಂಬ ಹೆಸರಿನ ಅವರ ಮನೆಯಲ್ಲಿ 15 ಲಕ್ಷಕ್ಕೂ ಹೆಚ್ಚು ಪುಸ್ತಕಗಳಿವೆ ಎಂದು ಅಂದಾಜಿಸಲಾಗಿದೆ. ಪುಸ್ತಕಗಳ ಹೊರತಾಗಿ, ಅವರ ಅಪರೂಪದ ಸಂಗ್ರಹವು ಅಪಾರ ಸಂಖ್ಯೆಯ ನಾಣ್ಯಗಳು, ಅಂಚೆ ಚೀಟಿಗಳು, ಹಳೆಯ ಹಿಂದಿ ಚಲನಚಿತ್ರ ಪೋಸ್ಟರ್‌ಗಳನ್ನು, ಹಳೆಯ ಇಂಗ್ಲಿಷ್ ಮತ್ತು ಭಾರತೀಯ ಪತ್ರಿಕೆಗಳು, ನಿಯತಕಾಲಿಕೆಗಳು ಮತ್ತು ಕರೆನ್ಸಿ ನೋಟುಗಳಿಗೆ ವಿಸ್ತರಿಸಿದೆ. ಅವರ ಸಂಗ್ರಹವು ಕನ್ನಡ ಸಾಹಿತ್ಯ ದಿಗ್ಗಜ ಕುವೆಂಪು ಅವರ ಸಂಪೂರ್ಣ ಸಾಹಿತ್ಯ ಮತ್ತು ಅವರ ಮೇಲೆ ಬರೆದ 566 ಪ್ರಕಟಣೆಗಳನ್ನು ಒಳಗೊಂಡಿದೆ. ಗೌಡರು ವಿವಿಧ ರೀತಿಯ ಆಮಂತ್ರಣಗಳು, ಮದುವೆ ಕಾರ್ಡುಗಳು ಮತ್ತು ಶುಭಾಶಯ ಪತ್ರಗಳನ್ನು ಸಂಗ್ರಹಿಸಿರುತ್ತಾರೆ. ಅವರು 1975 ರಿಂದ ಇದನ್ನು

ಪು.ತಿ.ನೋ.



ಮಾಡುತ್ತಿದ್ದಾರೆ. ಅವರು ಈಗ ಐದು ಸಾವಿರಕ್ಕೂ ಹೆಚ್ಚು ವಿವಿಧರೀತಿಯ ಕಾರ್ಡುಗಳನ್ನು ಹೊಂದಿದ್ದಾರೆ.

ವಿಶ್ವದ ಅತಿದೊಡ್ಡ ಖಾಸಗಿ ಪುಸ್ತಕ ಸಂಗ್ರಹವನ್ನು ಹೊಂದುವುದು ಗೌಡರ ಕನಸು. ಅವರು ದೊಡ್ಡ ಮಹತ್ವಾಕಾಂಕ್ಷೆಗಳನ್ನು ಹೊಂದಿದ್ದರೂ, ಹಣದ ಕೊರತೆಯಿಂದಾಗಿ ಅವುಗಳನ್ನು ಪೂರೈಸಲು ಸಾಧ್ಯವಾಗುವುದಿಲ್ಲ. ಪ್ರಸ್ತುತ, ತನ್ನ ಸಂದರ್ಶಕರ ಅನುಕೂಲಕ್ಕಾಗಿ ತನ್ನ ಸಂಗ್ರಹವನ್ನು ಸಂಘಟಿಸಲು ಉದ್ಯೋಗಿಗಳಿಗೆ ಸಾಧ್ಯವಾಗುತ್ತಿಲ್ಲ ಮತ್ತು ಪುಸ್ತಕಗಳು ಅಸ್ತವ್ಯಸ್ತವಾಗಿರುವ ರಾಶಿಯಲ್ಲಿ ರಾಶಿಯಾಗಿವೆ. "ನಾನು ನನ್ನ ಸಂಬಳದ 60 ಪ್ರತಿ ಶತವನ್ನು ಪುಸ್ತಕಗಳಿಗಾಗಿ ಖರ್ಚು ಮಾಡುತ್ತೇನೆ," ಅವರು ತಮ್ಮ ಉತ್ಸಾಹಕ್ಕಾಗಿ ತನ್ನ ಸಂಪೂರ್ಣ ಆಸ್ತಿಯನ್ನು ಮಾರಾಟ ಮಾಡುವುದರಲ್ಲಿ ಆಶ್ಚರ್ಯವೇನಿಲ್ಲ. ಆದರೂ, ಹಣಕಾಸಿನ ಮುಗ್ಗಟ್ಟು ಈ ಅಸಾಮಾನ್ಯ ಪ್ರಯತ್ನದಲ್ಲಿ ಪಾಲ್ಗೊಳ್ಳುವುದನ್ನು ಎಂದಿಗೂ ನಿಲ್ಲಿಸಲಿಲ್ಲ. ಗೌಡರಿಗೆ ಇದು ವ್ಯರ್ಥ ಪ್ರಯತ್ನವಲ್ಲ. ಅವರ ಗ್ರಂಥಾಲಯವು ದೇಶದ ವಿವಿಧ ಭಾಗಗಳ ಅನೇಕ ಸಂಶೋಧನಾ ವಿದ್ಯಾರ್ಥಿಗಳಿಗೆ ಅವರ ಕನಸುಗಳನ್ನು ಮುಂದುವರಿಸಲು ಸಹಾಯ ಮಾಡಿದೆ. ಇದು ವಿದ್ಯಾರ್ಥಿಗಳಿಗೆ ಮತ್ತು ಜ್ಞಾನವನ್ನು ಪಡೆಯಲು ಆಸಕ್ತಿ ಹೊಂದಿರುವ ಯಾರಿಗಾದರೂ ಮುಕ್ತವಾಗಿದೆ. ಗೌಡರು ತಮ್ಮ ಅಭಿಮಾನಕ್ಕೆ ಅನೇಕ ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಕರ್ನಾಟಕ ರಾಜ್ಯ ಸರ್ಕಾರವು 2014ರಲ್ಲಿ ಅವರಿಗೆ ಪ್ರತಿಷ್ಠಿತ 'ಕನ್ನಡ ರಾಜ್ಯೋತ್ಸವ ಪ್ರಶಸ್ತಿ' ನೀಡಿ ಗೌರವಿಸಿದೆ. ಕರ್ನಾಟಕ ಗ್ರಂಥಾಲಯ ಸಂಘವು ಅವರ ವೈಯಕ್ತಿಕ ಸಂಗ್ರಹಗಳಿಗಾಗಿ 2011ರಲ್ಲಿ ರಾಜ್ಯ ಗ್ರಂಥಾಲಯ ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಅವರು 2012ರಲ್ಲಿ ಮಂಡ್ಯ ರಾಜ್ಯದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ತಮ್ಮ ಪರೋಪಕಾರಿ ಕಾರ್ಯಕ್ಕಾಗಿ ಕರ್ನಾಟಕ ರಾಜ್ಯ ಪ್ರಶಸ್ತಿಯನ್ನು ಸಹ ಗೆದ್ದಿದ್ದಾರೆ.

**– ಶ್ರೀ ನಂದೀಶ್ ಎ.ಆರ್.**
ಇತಿಹಾಸ ಸಹಾಯಕ ಪ್ರಾಧ್ಯಾಪಕರು.


## ಅಂತರಾಷ್ಟ್ರೀಯ ವಸ್ತು ಸಂಗ್ರಹಾಲಯ ದಿನಾಚರಣೆ ಕಾರ್ಯಕ್ರಮ ವರದಿ

ದಿನಾಂಕ 18.05.2022 ಬುಧವಾರದಂದು ಪುರಾತತ್ವ ಇಲಾಖೆ, ಮೈಸೂರು ಹಾಗೂ ಇತಿಹಾಸ ವಿಭಾಗ, ಮಹಾಜನ ಪ್ರಥಮ ದರ್ಜೆ ಕಾಲೇಜುಗಳ ಸಹಯೋಗದಲ್ಲಿ ಅಂತರರಾಷ್ಟ್ರೀಯ ವಸ್ತು ಸಂಗ್ರಹಾಲಯ ದಿನಾಚರಣೆ ಕಾರ್ಯಕ್ರಮವನ್ನು ಪುರಾತತ್ವ ಇಲಾಖೆ, ವಸ್ತು ಸಂಗ್ರಹಾಲಯ, ಮೈಸೂರು ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಇತಿಹಾಸ ಪ್ರಾಧ್ಯಾಪಕರಾದ ಎಲ್.ಎನ್. ಸ್ವಾಮಿಯವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಮೈಸೂರಿನ ವಿವಿಧ ವಸ್ತುಸಂಗ್ರಹಾಲಯಗಳ ಬಗ್ಗೆ ಹಾಗೂ ಭಾರತದ ವಸ್ತು ಸಂಗ್ರಹಾಲಯಗಳು ಬೆಳೆದು ಬಂದ ಬಗ್ಗೆ ಸಂವಾದದ ಮೂಲಕ ವಿವರಣೆ ನೀಡಿದರು.

ಇಲಾಖೆಯ ನಿರ್ದೇಶಕರಾದ ಶ್ರೀಮತಿ ಗೀತಾರವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸಾರ್ವಜನಿಕರು, ಮಾನಸಗಂಗೋತ್ರಿಯ ವಿದ್ಯಾರ್ಥಿಗಳು ಹಾಗೂ ನಮ್ಮ ಕಾಲೇಜಿನ 24 ವಿದ್ಯಾರ್ಥಿಗಳನ್ನು ಎರಡು ಬಸ್‌ಗಳ ಮೂಲಕ ಕರೆದೊಯ್ದು ಮೈಸೂರಿನ ಸಿದ್ಧಾರ್ಥನಗರದ ಪ್ರಾಕೃತಿಕ ಇತಿಹಾಸ ವಿಜ್ಞಾನ ವಸ್ತುಸಂಗ್ರಹಾಲಯ, ಮಾನಸಗಂಗೋತ್ರಿಯಲ್ಲಿನ ಜಾನಪದ ವಸ್ತು ಸಂಗ್ರಹಾಲಯ ಮತ್ತು ಪುರಾತತ್ವ ಸಂಗ್ರಹಾಲಯ ಹಾಗೂ ರೈಲ್ವೇ ಮ್ಯೂಸಿಯಂಗಳಿಗೆ ಭೇಟಿ ನೀಡುವ ಮೂಲಕ ವಿದ್ಯಾರ್ಥಿಗಳ ವೀಕ್ಷಣೆಗೆ ಅವಕಾಶ ಕಲ್ಪಿಸಿದ್ದರು. ಇದರಿಂದ ವಿದ್ಯಾರ್ಥಿಗಳ ಜ್ಞಾನಸಂಪತ್ತು ಹೆಚ್ಚು ವೃದ್ಧಿಯಾಗಲು ಸಹಕಾರಿಯಾಯಿತು. ಒಟ್ಟಾರೆ ಇದೊಂದು ಅರ್ಥಪೂರ್ಣ ಕಾರ್ಯಕ್ರಮವಾಗಿದ್ದು, ವಿಭಾಗದ ಮುಖ್ಯಸ್ಥರಾದ ಡಾ.ಶ್ರೀಧರ ಹೆಚ್. ಹಾಗೂ ಶ್ರೀ ನಂದೀಶ್, ಅವರ ಮಾರ್ಗದರ್ಶನದಲ್ಲಿ ಕಾರ್ಯಕ್ರಮವು ಯಶಸ್ವಿಯಾಗಿ ಜರುಗಿತು.

**– ಮನೋಜ್‌ಕುಮಾರ್,**
ಪ್ರಥಮ ಬಿ.ಎ. ವಿದ್ಯಾರ್ಥಿ


















Department of History Students Participated in International Musium Day organised by Department of Archaeology, Museums and Heritage, Mysuru. on 18.05.2022



# Department of History & Journalism and Mass Comunication organised Study Visit to Sri Ankegowda Book House Haralahalli, Pandavapura Taluk - 28.05.2022


















Bharathiya Ithihasha Sankalana Samithi, Karnataka
organised Special Talk on
'Tourism Management in Sikkim From A Historical Perspective'
at Mahajana Tourism Centre, Metagalli - 31.05.2022







Student Volunteers of the College Actively Participated in the
First Graduation Ceremony -04.06.2022



ಶಿಕ್ಷಣದಿಂದ ಶ್ರೇಷ್ಠತೆ

**ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜು (ಸ್ವಾಯತ್ತ)**

ಜಯಲಕ್ಷ್ಮೀಪುರಂ, ಮೈಸೂರು–12

Azadi Ka Amrit Mahotsav

ಶ್ರೇಷ್ಠತೆಯ ಸಾಮರ್ಥ್ಯವುಳ್ಳ ಕಾಲೇಜು

**ಇತಿಹಾಸ ವಿಭಾಗ**

**Dept. of History**

**ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಯೋಜನೆಗೊಂಡು, ನ್ಯಾಕ್‌ನಿಂದ 'ಎ' ಮಾನ್ಯತೆ ಪಡೆದಿದೆ.**




ಸಂಚಿಕೆ: 34 ಸೆಪ್ಟೆಂಬರ್ 2022 ಪ್ರಧಾನ ಸಂಪಾದಕರು: ಡಾ. ಬಿ.ಆರ್. ಜಯಕುಮಾರಿ, ಪ್ರಾಂಶುಪಾಲರು www.mahajanafgc.com ಸಂಪಾದಕರು: ಡಾ.ಶ್ರೀಧರ ಹೆಚ್, ಇತಿಹಾಸ ವಿಭಾಗ ಪುಟಗಳು: 08

## ಸಂಪಾದಕೀಯ

### ಆಜಾದಿ ಕಾ ಅಮೃತ ಮಹೋತ್ಸವ ಸ್ಮರಣೆಯಲ್ಲಿ

## ಭಾರತದ ರಾಷ್ಟ್ರಧ್ವಜ–ಐತಿಹಾಸಿಕ ಹಿನ್ನೋಟ

**"ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳಾದ ಹಿನ್ನೆಲೆಯಲ್ಲಿ ಮಂಗಳವಾರದಿಂದ ಆ.15ರ ವರೆಗೆ ತಮ್ಮ ಸಾಮಾಜಿಕ ಜಾಲತಾಣಗಳ ಪ್ರೊಫೈಲ್‌ನಲ್ಲಿ ಧ್ವಜವನ್ನು ಹಾಕಿಕೊಳ್ಳುವಂತೆ ಪ್ರಧಾನಿ ಮೋದಿ ಕರೆ ನೀಡಿದ್ದಾರೆ. ರಾಷ್ಟ್ರ ಧ್ವಜವೆಂದರೆ ನಮ್ಮ ದೇಶಾಭಿಮಾನದ ಹೆಮ್ಮೆಯ ಸಂಕೇತ. ಸದ್ಯ ಇರುವ ಧ್ವಜವನ್ನು ರೂಪಿಸಿದವರು, ನಮ್ಮ ನೆರೆಯ ಆಂಧ್ರ ಪ್ರದೇಶದವರಾದ ಪಿಂಗಾಳಿ ವೆಂಕಯ್ಯ. ಈಗ ಅವರ ನೆನಪಿನಲ್ಲಿ ಇಂದಿನಿಂದ ಆಂದೋಲನ ನಡೆಸಲಾಗುತ್ತದೆ. ಹಾಗಾದರೆ, ನಮ್ಮ ರಾಷ್ಟ್ರಧ್ವಜ ಇತಿಹಾಸವೇನು? ಇದು ಅಂಗೀಕಾರವಾಗಿದ್ದು ಯಾವಾಗ? ಈ ಕುರಿತ ಒಂದು ನೋಟ ಇಲ್ಲಿದೆ..".**

### ಈಗಿನ ಧ್ವಜ ಅಂಗೀಕರಿಸಿದ್ದು ಯಾವಾಗ?

1947ರ ಜುಲೈ 22ರಂದು ಈಗ ಇರುವ ಅಶೋಕ ಚಕ್ರ ಒಳಗೊಂಡ ತ್ರಿವರ್ಣ ಧ್ವಜವನ್ನು ಅಸೆಂಬ್ಲಿ ಅಂಗೀಕರಿಸಿತು. ಭಾರತಕ್ಕೆ ಸ್ವಾತಂತ್ರ್ಯ ನೀಡುವ ಕುರಿತಾಗಿ ಆಗಲೇ ಬ್ರಿಟಿಷ್ ಸರಕಾರದ ಜತೆ ಮಾತುಕತೆಗಳು ನಡೆಯುತ್ತಿದ್ದವು. ಧ್ವಜ ಅಂಗೀಕರಿಸಿದ ಮೇಲೆ 1947ರ ಆ.15ರಂದು ದೇಶದ ಮೊದಲ ಪ್ರಧಾನಿ ಜವಾಹರ್ ಲಾಲ್ ನೆಹರೂ ಅವರು, ಅಶೋಕ ಚಕ್ರವುಳ್ಳ ತ್ರಿವರ್ಣ ಧ್ವಜವನ್ನು ಹಾರಿಸಿದರು. ವಿಶೇಷವೆಂದರೆ, ಈ ಧ್ವಜವನ್ನು ಹಾರಿಸುವ ಮುನ್ನ ಭಾರತದಲ್ಲಿ ವಿವಿಧ ರೀತಿಯ ಧ್ವಜಗಳನ್ನು ಪರಿಚಯಿಸಲಾಗಿತ್ತು.

1931ರಲ್ಲಿ ರೂಪಿಸಲಾಗಿದ್ದ ಧ್ವಜದಲ್ಲಿ ಕೇವಲ ಒಂದು ಬದಲಾವಣೆಯಾಯಿತು. ಚರಕವನ್ನು ಬಿಟ್ಟು, ಅಶೋಕ ಚಕ್ರವನ್ನು ಬಳಸಿಕೊಳ್ಳಲಾಯಿತು. ಚರಕ ಬಳಸಿಕೊಂಡರೆ ಹಿಂಭಾಗದಲ್ಲಿ ಉಲ್ಟಾ ಕಾಣುತ್ತದೆ ಮತ್ತು ಅಶೋಕ ಚಕ್ರ ಆಗಿನ 24 ರಾಜ್ಯಗಳನ್ನು ಪ್ರತಿನಿಧಿಸುತ್ತದೆ ಎಂಬ ಕಾರಣಕ್ಕಾಗಿ ಅಳವಡಿಸಿಕೊಳ್ಳಲಾಯಿತು. ಅಂದ ಹಾಗೆ, ಈ ಧ್ವಜವನ್ನು ಪರಿಚಯಿಸಿದ್ದು ಆಂಧ್ರಪ್ರದೇಶ ಮೂಲದ ಪಿಂಗಾಳಿ ವೆಂಕಯ್ಯ ಅವರು. 1916ರಲ್ಲಿ ಮೊದಲ ಬಾರಿಗೆ ಧ್ವಜವನ್ನು ವಿನ್ಯಾಸ ಮಾಡಿದರು. ನಂತರದ ದಿನಗಳಲ್ಲಿ ಇದೇ ಧ್ವಜ ವಿವಿಧ ರೂಪ ತಾಳಿತು.

### 1857 ಬ್ರಿಟಿಷರ ಧ್ವಜ

ಭಾರತಕ್ಕೇ ಅಂತ ಮೊದಲ ಧ್ವಜ ಪರಿಚಯಿಸಿದ್ದು, ಭಾರತೀಯರಲ್ಲ. ಅದು ಬ್ರಿಟಿಷರು. 1857ರಲ್ಲಿ ಮೊದಲ ಸ್ವಾತಂತ್ರ್ಯ ಸಂಗ್ರಾಮದ ಅನಂತರ, ಎಚ್ಚೆತ್ತುಕೊಂಡ ಬ್ರಿಟಿಷರು, ಭಾರತಕ್ಕೇ ಒಂದು ಧ್ವಜವಿರಲಿ ಅಂತ ಅವರದ್ದೇ ಮಾದರಿಯ ಧ್ವಜ ಪರಿಚಯಿಸಿದರು. ಇದು ನೀಲಿ ಬಣ್ಣದ್ದಾಗಿದ್ದು, ಬ್ರಿಟಿಷ್ ರಾಜಮನೆತನದ ಅಡಿಯಲ್ಲಿ ಭಾರತವಿದೆ ಎಂಬುದನ್ನು ಸೂಚಿಸುತ್ತಿತ್ತು.

### 1904 ದೇಶದ ಮೊದಲ ಧ್ವಜ

ಸ್ವಾಮಿ ವಿವೇಕಾನಂದ ಅವರ ಶಿಷ್ಯೆ ಭಗಿನಿ ನಿವೇದಿತಾ ಅವರು ಭಾರತದ ಮೊದಲ ಧ್ವಜವನ್ನು ವಿನ್ಯಾಸಗೊಳಿಸಿದರು. ಇದರಲ್ಲಿ ಎರಡೇ ಬಣ್ಣಗಳಿದ್ದವು. ಹಳದಿ ಮತ್ತು ಕೆಂಪು ಬಣ್ಣದ ಈ ಧ್ವಜದ ಮಧ್ಯದಲ್ಲಿ ವಜ್ರ ಎಂದು ಬರೆಯಲಾಗಿತ್ತು. ಜತೆಗೆ, ವಂದೇ ಮಾತರಂ ಎಂಬುದನ್ನೂ ಧ್ವಜದ ಎಡ ಅಥವಾ ಬಲಭಾಗದಲ್ಲಿ ಬರೆಯಲಾಗಿತ್ತು. ಇದರಲ್ಲಿ ಕೆಂಪು ಸ್ವಾತಂತ್ರ್ಯ ಹೋರಾಟವನ್ನು ಪ್ರತಿನಿಧಿಸಿದ್ದರೆ, ಹಳದಿ ಬಣ್ಣವು ಜಯದ ಸಂಕೇತವಾಗಿತ್ತು.

1906ರಲ್ಲಿ ಕೋಲ್ಕತಾದ ಪಾರ್ಸಿ ಬಗನ್ ಎಂಬಲ್ಲಿ ಮೊದಲ ಬಾರಿಗೆ ರಾಷ್ಟ್ರೀಯ ಧ್ವಜ ಹಾರಿಸಲಾಯಿತು. ಆದರೆ, ಇದರಲ್ಲಿ ಕೊಂಚ ಬದಲಾವಣೆಯಾಗಿತ್ತು. ಇದು ಮೂರು ಬಣ್ಣಗಳನ್ನು ಒಳಗೊಂಡಿದ್ದು, ಮೇಲೆ ಹಸಿರು, ಮಧ್ಯ ಹಳದಿ ಮತ್ತು ಕೆಳಗೆ ಕೆಂಪು ಬಣ್ಣವನ್ನು ಒಳಗೊಂಡಿತ್ತು. ಹಸಿರು ಬಣ್ಣದಲ್ಲಿ ಎಂಟು ಕಮಲಗಳು, ಹಳದಿ ಬಣ್ಣದ ಜಾಗದಲ್ಲಿ ವಂದೇ ಮಾತರಂ, ಕೆಳಗಿನ ಭಾಗದಲ್ಲಿ ಸೂರ್ಯ ಮತ್ತು ಚಂದ್ರನ ಚಿತ್ರಗಳಿದ್ದವು.

### 1906 ಕಾಮಾ ಧ್ವಜ

ಕೋಲ್ಕತಾದಲ್ಲಿ ಮೊದಲ ಬಾರಿಗೆ ಭಾರತದ್ದೇ ಆದ ಧ್ವಜ ಹಾರಿಸಿದ ಮೇಲೆ, ಮೇಡಮ್ ಭಿಕಾಜಿ ಕಾಮಾ, ವೀರ ಸಾವರ್ಕರ್



ಮತ್ತು ಶ್ಯಾಮ್‌ಜೀ ಕೃಷ್ಣಶರ್ಮ ಅವರು ಬೇರೊಂದು ಧ್ವಜವನ್ನು ವಿನ್ಯಾಸ ಮಾಡಿದರು. ಇದನ್ನು ಬರ್ಲಿನ್‌ಲ್ಲಿ ನಡೆದ ಸೋಶಿಯಲಿಸ್ಟ್ ಸಮಾವೇಶದಲ್ಲಿ ಪ್ರದರ್ಶಿಸಲಾಗಿತ್ತು. ಇದು ಮೂರು ಬಣ್ಣಗಳನ್ನು ಹೊಂದಿದ್ದು, ಮೇಲೆ ಕೇಸರಿ, ಮಧ್ಯ ಹಳದಿ ಮತ್ತು ಕೆಳಗೆ ಹಸಿರು ಬಣ್ಣವಿತ್ತು. ಮೇಲಿನ ಕೇಸರಿಯಲ್ಲಿ ಒಂದು ಕಮಲ ಮತ್ತು ಏಳು ನಕ್ಷತ್ರಗಳಿದ್ದವು. ಈ ನಕ್ಷತ್ರಗಳು ಭಾರತದ ಸಪ್ತರಿಷಿಗಳನ್ನು ಪ್ರತಿನಿಧಿಸುತ್ತಿದ್ದವು. ಮಧ್ಯ ವಂದೇಮಾತರಂ, ಕೆಳಗೆ ಸೂರ್ಯ ಮತ್ತು ಚಂದ್ರನ ಚಿತ್ರವಿತ್ತು. ವಿಶೇಷವೆಂದರೆ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಹಾರಿಸಲಾದ ಮೊದಲ 'ಭಾರತದ ಧ್ವಜ' ಎಂಬ ಖ್ಯಾತಿಯೂ ಸಿಕ್ಕಿತು.

**1917 ಆ್ಯನಿಬೆಸೆಂಟ್/ಲೋಕಮಾನ್ಯ ತಿಲಕ್**

ಭಾರತದ ಮೂರನೇ ಧ್ವಜವಿದು. ಆ್ಯನಿಬೆಸೆಂಟ್ ಮತ್ತು ಲೋಕಮಾನ್ಯ ತಿಲಕ್ ಅವರು ಹೋಮ್ ರೂಲ್ ಆಂದೋಲನದ ವೇಳೆ ಇದನ್ನು ಪರಿಚಯಿಸಿದರು. ರಾಷ್ಟ್ರೀಯ ಮಟ್ಟದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಒಂದು ರೂಪರೇಖೆ ಸಿಕ್ಕಿದ್ದು ಈ ಸಂದರ್ಭದಲ್ಲೇ. ಈ ಧ್ವಜ ಬೇರೊಂದು ರೀತಿಯಲ್ಲಿತ್ತು. ಮೇಲೆ ಸಣ್ಣದಾಗಿ ಬ್ರಿಟಿಷ್ ಧ್ವಜ, ಮತ್ತೊಂದು ಭಾಗದಲ್ಲಿ ಚಂದ್ರ ಮತ್ತು ನಕ್ಷತ್ರ, ಹಾಗೆಯೇ ಸಪ್ತರಿಷಿಗಳನ್ನು ಪ್ರತಿನಿಧಿಸುವ 7 ನಕ್ಷತ್ರಗಳು ಇದ್ದವು. ಮೊದಲಿನ ರೀತಿಯಲ್ಲಿ ಇದು ತ್ರಿವರ್ಣ ಧ್ವಜವಾಗಿರಲಿಲ್ಲ. ಇದರಲ್ಲಿ ಕಪ್ಪು, ಕೆಂಪು, ಹಸಿರು ಬಣ್ಣಗಳು ಇದ್ದವು.

**1921 ಪಿಂಗಾಳಿ ವೆಂಕಯ್ಯ**

ಮಹಾತ್ಮಾಗಾಂಧಿ ಅವರು ಆಂಧ್ರಪ್ರದೇಶಕ್ಕೆ ತೆರಳಿದ್ದಾಗ, ಅಲ್ಲಿನ ಯುವಕ ಪಿಂಗಾಳಿ ವೆಂಕಯ್ಯ ಎಂಬವರು, ತಾವೇ ರೂಪಿಸಿದ್ದ ಧ್ವಜವೊಂದನ್ನು ನೀಡಿದರು. ವೆಂಕಯ್ಯ ಅವರು ಕೊಟ್ಟ ಧ್ವಜದಲ್ಲಿ ಕೇವಲ ಎರಡು ಬಣ್ಣಗಳು ಮಾತ್ರ ಇದ್ದವು. ಅಂದರೆ, ಹಸಿರು ಮತ್ತು ಕೆಂಪು ಮಾತ್ರ ಇತ್ತು. ಇವು ದೇಶದ ಎರಡು ಪ್ರಮುಖ ಧರ್ಮಗಳನ್ನು ಪ್ರತಿನಿಧಿಸುತ್ತಿದ್ದವು. ಗಾಂಧೀಜಿ ಅವರೇ ವೆಂಕಯ್ಯ ಅವರಿಗೆ ಸಲಹೆ ನೀಡಿ ಬಿಳಿ ಬಣ್ಣ ಸೇರಿಸಲು ಹೇಳಿದರು. ಬಿಳಿ ಉಳಿದ ಎಲ್ಲ ಧರ್ಮಗಳನ್ನು ಪ್ರತಿನಿಧಿಸುತ್ತದೆ ಎಂದಿದ್ದರು. ಅಲ್ಲದೆ, ಮಧ್ಯದಲ್ಲಿ ಚರಕವನ್ನೂ ಸೇರಿಸುವಂತೆ ಸಲಹೆ ನೀಡಿದ್ದರು. ಆಗ ರಾಷ್ಟ್ರೀಯ ಮಟ್ಟದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಪ್ರಮುಖ ಸಂಕೇತವಾಗಿ ಈ ಚರಕ ಗುರುತಿಸಿಕೊಂಡಿತ್ತು.

**1931ರ ಹೊಸ ಮಾದರಿ**

ಈ ವರ್ಷ ಭಾರತದ ಧ್ವಜದ ಲೆಕ್ಕಾಚಾರದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವ ದಿನ. ಈಗ ಇರುವ ಧ್ವಜದ ಮಾದರಿಯನ್ನು ಇದೇ ವರ್ಷ ಅಳವಡಿಸಿಕೊಳ್ಳಲಾಯಿತು. ಆಂಧ್ರಪ್ರದೇಶದ ಪಿಂಗಾಳಿ ವೆಂಕಯ್ಯ ಅವರೇ ಹೊಸದಾಗಿ ಧ್ವಜವನ್ನು ರೂಪಿಸಿದರು. ಇದರಲ್ಲಿ ಮೇಲೆ ಕೇಸರಿ, ಮಧ್ಯ ಬಿಳಿ ಮತ್ತು ಕೆಳಗೆ ಹಸಿರು ಬಣ್ಣವನ್ನು ಬಳಸಿಕೊಳ್ಳಲಾಯಿತು. ಮಧ್ಯದಲ್ಲಿ ಚರಕವನ್ನು ಇಡಲಾಯಿತು. ಮೇಲೆ ಇದ್ದ ಕೆಂಪು ಬಣ್ಣದ ಬದಲಿಗೆ ಕೇಸರಿ ಬಳಸಿಕೊಂಡರೆ, ಮಧ್ಯದ ಹಸಿರು ಬಣ್ಣದ ಬದಲಿಗೆ ಬಿಳಿ ಹಾಗೂ ಕೆಳಗೆ ಹಸಿರು ಬಣ್ಣ ಬಂದಿತು. ಕಾಂಗ್ರೆಸ್ ಕಮಿಟಿಯಲ್ಲಿ ಈ ಧ್ವಜವನ್ನು ಅಳವಡಿಸಿಕೊಂಡು, ಭಾರತದಾದ್ಯಂತ ಇದನ್ನೇ ಬಳಸಿಕೊಳ್ಳಲು ತೀರ್ಮಾನಿಸಲಾಯಿತು. ಸ್ವಾತಂತ್ರ್ಯ ಸಿಗುವವರೆಗೂ ಇದೇ ಬಳಕೆಯಲ್ಲಿತ್ತು.

**ರಾಷ್ಟ್ರಧ್ವಜದ ರೂವಾರಿ ಪಿಂಗಾಳಿ ವೆಂಕಯ್ಯ**

ಪಿಂಗಾಳಿ ವೆಂಕಯ್ಯ... ದೇಶ ಎಂದಿಗೂ ಮರೆಯದಂಥ ಹೆಸರಿದು. ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರ, ಹಾಗೆಯೇ, ಭಾರತಕ್ಕೆ ತನ್ನದೇ ಆದ ಧ್ವಜವೊಂದನ್ನು ರೂಪಿಸಿಕೊಟ್ಟ ವ್ಯಕ್ತಿ. ಹಾಗೆಯೇ, ಇವರಿಗೆ ಧ್ವಜವೊಂದನ್ನು ಏಕೆ ರೂಪಿಸಬೇಕು ಎಂಬ ಐಡಿಯಾ ಬಂದಿದ್ದೇ ವಿಶೇಷ. ಇದಕ್ಕೆ ಕಾರಣವೂ ಇದೆ.

ತಮ್ಮ 19ನೇ ವಯಸ್ಸಿನಲ್ಲಿಯೇ ವೆಂಕಯ್ಯ ಅವರು, ದಕ್ಷಿಣ ಆಫ್ರಿಕಾಗೆ ಹೋದರು. ಬ್ರಿಟಿಷ್ ಸೇನೆಗೆ ಸೇರಿದ್ದ ಅವರು, ಬ್ರಿಟನ್ ಪರವಾಗಿ ಹೋರಾಡಲು ಅಲ್ಲಿಗೆ ಹೋಗಿದ್ದರು. ಅಲ್ಲಿ ಬ್ರಿಟಿಷ್ ಸೇನಾಧಿಕಾರಿ ಬ್ರಿಟನ್ ಧ್ವಜಕ್ಕೆ ವಂದಿಸುವಂತೆ ತನ್ನೆಲ್ಲ ಸೈನಿಕರಿಗೆ ಹೇಳುತ್ತಿದ್ದ. ಆದರೆ, ಪಿಂಗಾಳಿ ವೆಂಕಯ್ಯ ಅವರಿಗೆ ಇದು ಇಷ್ಟವಾಗಲಿಲ್ಲ. ಹೀಗಾಗಿ, ಅವರು ಭಾರತಕ್ಕೆ ವಾಪಸ್ ಹೋಗಿ, ಭಾರತಕ್ಕೆ ಒಂದು ಧ್ವಜ ರೂಪಿಸಬೇಕು ಎಂದುಕೊಂಡರು.

ಅಂದ ಹಾಗೆ ವೆಂಕಯ್ಯ ಅವರು ಕೇವಲ ಸೈನಿಕರಾಗಿರಲಿಲ್ಲ. ಅವರೊಬ್ಬ ರೈತ, ಉಪನ್ಯಾಸಕ, ಜಿಯಾಲಜಿಸ್ಟ್ ಕೂಡ ಆಗಿದ್ದರು. ಜಪಾನ್ ಭಾಷೆಯಲ್ಲೂ ಪರಿಣತರಾಗಿದ್ದ ಅವರು, ಜಪಾನ್ ವೆಂಕಯ್ಯ ಎಂದೇ ಪರಿಚಿತರಾಗಿದ್ದರು.

ವೆಂಕಯ್ಯ ಅವರು ಜನಿಸಿದ್ದು 1876, ಆ. 2ರಂದು. ಆಂಧ್ರಪ್ರದೇಶದ ಮಚಲಿಪಟ್ಟಣಂ ಬಳಿ ಇರುವ ಭಾಟ್ಲ ಪೆನುಮಾರು ಎನ್ನುವಲ್ಲಿ ಜನ್ಮ ತಾಳಿದರು. 19 ವರ್ಷವಿರುವಾಗ ದಕ್ಷಿಣ ಆಫ್ರಿಕಾಕ್ಕೆ ತೆರಳಿದ್ದ ಅವರು, ವಾಪಸ್ ಬಂದು ಧ್ವಜ ರೂಪಿಸಿದ್ದರು. 1921ರಲ್ಲಿ ಮೊದಲ ಬಾರಿಗೆ ಮಹಾತ್ಮ ಗಾಂಧಿಯವರಿಗೆ ಧ್ವಜ ನೀಡಿದ್ದರು. ಬಳಿಕ ಇದರ ವಿನ್ಯಾಸವನ್ನು ಬದಲಿಸಿಕೊಟ್ಟಿದ್ದರು.

ಅಂದ ಹಾಗೆ, 2009ರಲ್ಲಿ ವೆಂಕಯ್ಯ ಅವರ ಹೆಸರಿನಲ್ಲಿ ಕೇಂದ್ರ ಸರಕಾರ ಅಂಚೆ ಚೀಟಿಯೊಂದನ್ನು ತಂದಿದೆ. 2014ರಲ್ಲಿ ವಿಜಯವಾಡ ರೈಲ್ವೇ ನಿಲ್ದಾಣ ಮತ್ತು ಅಲ್ಲಿನ ಆಕಾಶವಾಣಿಗೆ ಇವರ ಹೆಸರನ್ನು ಇಡಲಾಗಿದೆ. ಹಾಗೆಯೇ, ಈಗ ಅವರ ನೆನಪಿನಲ್ಲಿಯೇ ಆ. 2 ರಿಂದ 15 ರ ವರೆಗೆ ಮನೆ ಮನೆಯ ಮೇಲೆ ತಿರಂಗಾ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಪ್ರೊಫೈಲ್ ಪಿಕ್ ಆಗಿ ಬಳಸಿಕೊಳ್ಳುವಂತೆ ಮನವಿ ಮಾಡಿದೆ.

**– ಡಾ. ಶ್ರೀಧರ ಹೆಚ್.**
ಮುಖ್ಯಸ್ಥರು, ಇತಿಹಾಸ ವಿಭಾಗ



## ಆಜಾದಿ ಕಾ ಅಮೃತ್ ಮಹೋತ್ಸವ – ಆಗಸ್ಟ್, 2022

### ವಿಶೇಷ ಉಪನ್ಯಾಸ ಮತ್ತು ಸಂವಾದ – 9.6.2022

ವಿಷಯ: ಭಾರತದ ಸ್ವಾತಂತ್ರ್ಯ ಚಳುವಳಿ

ಸಂಪನ್ಮೂಲ ವ್ಯಕ್ತಿ: ಡಾ. ಮಹದೇವಸ್ವಾಮಿ ಎಂ, ಮುಖ್ಯಸ್ಥರು, ಇತಿಹಾಸ ವಿಭಾಗ, ಜೆಎಸ್ಎಸ್ ಮಹಿಳಾ ಕಾಲೇಜು, ಮೈಸೂರು



## ಆಜಾದಿ ಕಾ ಅಮೃತ್ ಮಹೋತ್ಸವ – ಆಗಸ್ಟ್, 2022

### ವಿಶೇಷ ಉಪನ್ಯಾಸ ಮತ್ತು ಸಂವಾದ – 15.6.2022


ವಿಷಯ: ಶಿವಾಜಿ ಮತ್ತು ಹಿಂದೂ ಸ್ವರಾಜ್ಯ ಸ್ಥಾಪನೆ

ಸಂಪನ್ಮೂಲ ವ್ಯಕ್ತಿ: ಡಾ. ಲ.ನ. ಸ್ವಾಮಿ, ಇತಿಹಾಸ ಪ್ರಾಧ್ಯಾಪಕರು,





## ಆಜಾದಿ ಕಾ ಅಮೃತ್ ಮಹೋತ್ಸವ – ಆಗಸ್ಟ್, 2022
## ಮೈಸೂರು ವಿಶ್ವವಿದ್ಯಾನಿಲಯದ ಗಾಂಧಿ ಅಧ್ಯಯನ ಸಂಸ್ಥೆಗೆ
## ದ್ವಿತೀಯ ವರ್ಷದ ವಿದ್ಯಾರ್ಥಿಗಳ ಭೇಟಿ – 19.7.2022














## ಇತಿಹಾಸ ವಿಭಾಗ, ಪತ್ರಿಕೋದ್ಯಮ ವಿಭಾಗ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ – 1.8.2022

## ಒಂದು ದಿನದ ರಾಜ್ಯ ಮಟ್ಟದ ಕಾರ್ಯಗಾರ

Azadi Ka Amrit Mahotsav

## ವಿಷಯ: ಸ್ಪರ್ಧಾತ್ಮಕ ಪರೀಕ್ಷೆಗಳು ಮತ್ತು ಕೌಶಲ್ಯಾಭಿವೃದ್ಧಿ

## ಮುಖ್ಯ ಅತಿಥಿಗಳು: ಶ್ರೀ ಚೇತನ್ ಆರ್, ಪೊಲೀಸ್ ಅಧೀಕ್ಷಕರು, ಮೈಸೂರು ಜಿಲ್ಲೆ









# ಯಶಸ್ಸಿಗೆ ನಿರಂತರ ಶ್ರಮ ಅತ್ಯಗತ್ಯ

• **ಕನ್ನಡಪ್ರಭ ವಾರ್ತೆ** ಮೈಸೂರು

ವಿದ್ಯಾರ್ಥಿಗಳ ಯಶಸ್ಸಿಗೆ ನಿರಂತರ ಓದು ಹಾಗೂ ಪರಿಶ್ರಮ ಅತ್ಯಗತ್ಯ ಎಂದು ಮೈಸೂರು ಜಿಲ್ಲಾ ಪೊಲೀಸ ಅಧೀಕ್ಷಕ ಆರ್. ಚೇತನ್ ತಿಳಿಸಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಎಂಟ್ರಿ ಟು ಸರ್ವಿಸ್ ಹಾಗೂ ಐಕ್ಯೂಎಸಿ ಘಟಕ ಸಂಯುಕ್ತವಾಗಿ ಸೋಮವಾರ ಏರ್ಪಡಿಸಿದ್ದ ಸ್ಪರ್ಧಾತ್ಮಕ ಪರೀಕ್ಷೆಗಳು ಹಾಗೂ ಕೌಶಲ್ಯಾಭಿವೃದ್ಧಿ ಕುರಿತ ರಾಜ್ಯ ಮಟ್ಟದ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

ಹಳ್ಳಿಯಿಂದ ಬಂದ ನಾನು ಇಂದು ಒಳ್ಳೆಯ ಗೌರವಾನ್ವಿತ ಹುದ್ದೆಯಲ್ಲಿದ್ದೇನೆ. ನನ್ನ ಓದು, ವಿಷಯಾಸಕ್ತಿ, ಶ್ರಮ ಮತ್ತು ಕುಟುಂಬಸ್ಥರ ಪ್ರೋತ್ಸಾಹ ಕೇಂದ್ರ ಲೋಕ ಸೇವಾ ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯಲ್ಲಿ ರ್‍ಯಾಂಕ್‌ಗಳಿಸಿ, ಐಪಿಎಸ್ ಹುದ್ದೆಯನ್ನು ಅಲಂಕರಿಸಿ ಜನಸೇವೆ ಮಾಡಲು ಅವಕಾಶ ಒದಗಿ ಬಂದಿತು ಎಂದರು.

ಕೇಂದ್ರ ಲೋಕ ಸೇವಾ ಆಯೋಗವು ಪ್ರತಿವರ್ಷವು ಐಎಎಸ್, ಐಪಿಎಸ್, ಐಎಫ್‌ಎಸ್, ಐಆರ್‌ಎಸ್ ಹಾಗೂ ಇನ್ನಿತರ ಹುದ್ದೆಗಳಿಗೆ ಅರ್ಜಿಗಳನ್ನು ಕರೆಯುತ್ತದೆ. ಆಯೋಗವು ನಡೆಸುವ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ತಮ್ಮ ಆಸಕ್ತಿಯ ವಿಷಯ, ಸಮಯ ನಿರ್ವಹಣೆ, ಯೋಜನೆ, ನಿರಂತರ ಓದು, ಪರಿಶ್ರಮ ಮತ್ತು ಮುಂದಿನ ಏಳಿಗೆಗಾಗಿ ಕನಸನ್ನು ಕಾಣುವ ಹವ್ಯಾಸ, ಕನಸನು ನನಸಾಗಿಸುವ ಪ್ರವೃತ್ತಿ ಮೈಗೂಡಿಸಿಕೊಳ್ಳಬೇಕು ಎಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ. ಆರ್. ಜಯಕುಮಾರಿ, ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಡಾ.ಎಸ್.ಆರ್. ರಮೇಶ್, ಪರೀಕ್ಷಾ ನಿಯಂತ್ರಣಾಧಿಕಾರಿ ಆರ್. ಮಂಜುನಾಥ್, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ, ತಹಸೀಲ್ದಾರ್ ಮಹೇಂದರ್ ಇದ್ದರು. ಡಾ.ಎಚ್. ಶ್ರೀಧರ ಸ್ವಾಗತಿಸಿದರು. ಎಲ್.ರವಿ ಅಯ್ಯರ್ ವಂದಿಸಿದರು. ವಿಜಯಪ್ರಮೋದಿನಿ ನಿರೂಪಿಸಿದರು.



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಸೋಮವಾರ ನಡೆದ ಸ್ಪರ್ಧಾತ್ಮಕ ಪರೀಕ್ಷೆಗಳು ಹಾಗೂ ಕೌಶಲ್ಯಾಭಿವೃದ್ಧಿ ಕುರಿತ ಒಂದು ದಿನದ ಕಾರ್ಯಾಗಾರವನ್ನು ಎಸ್ಪಿ ಆರ್. ಚೇತನ್ ಉದ್ಘಾಟಿಸಿದರು.



## ಆಜಾದಿ ಕಾ ಅಮೃತ್ ಮಹೋತ್ಸವ – 12.8.2022 ರಿಂದ 15.8.2022

### ಇತಿಹಾಸ ವಿಭಾಗ, ಗ್ರಂಥಾಲಯ ಮತ್ತು ಐಕ್ಯೂಎಸಿ ಸಹಯೋಗದಲ್ಲಿ

### ಭಾರತೀಯ ಸ್ವಾತಂತ್ರ್ಯ ಹೋರಾಟಗಾರರ ಛಾಯಾಚಿತ್ರಗಳು, ಮಾದರಿಗಳು ಮತ್ತು ಪುಸ್ತಕಗಳ ಪ್ರದರ್ಶನ









# 'ಸ್ವಾತಂತ್ರ್ಯ ಸೇನಾನಿಗಳನ್ನು ಸ್ಮರಿಸಿ'

ಪ್ರಜಾವಾಣಿ ವಾರ್ತೆ

ಮೈಸೂರು: 'ದೇಶದ ಸ್ವಾತಂತ್ರ್ಯಕ್ಕಾಗಿ ಪ್ರಾಣ ತ್ಯಾಗ ಮಾಡಿದವರನ್ನು ಸ್ಮರಿಸಬೇಕು' ಎಂದು ಕಾಲೇಜು ಶಿಕ್ಷಣ ಇಲಾಖೆಯ ಮೈಸೂರು ಪ್ರಾದೇಶಿಕ ಜಂಟಿ ನಿರ್ದೇಶಕರ ಕಚೇರಿಯ ವಿಶೇಷಾಧಿಕಾರಿ ಡಾ.ಬಿ.ಕೆ.ಕೆಂಪೇಗೌಡ ಹೇಳಿದರು.

ಸ್ವಾತಂತ್ರ್ಯದ ಅಮೃತ ಮಹೋತ್ಸವ ಅಂಗವಾಗಿ ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಶುಕ್ರವಾರ ಆಯೋಜಿಸಿದ್ದ ಸ್ವಾತಂತ್ರ್ಯ ಹೋರಾಟಗಾರರ ಭಿತ್ತಿಚಿತ್ರಗಳು ಹಾಗೂ ಪುಸ್ತಕ ಪ್ರದರ್ಶನವನ್ನು ಉದ್ಘಾಟಿಸಿದ ಅವರು ಮಾತನಾಡಿದರು.

'ಸ್ವಾತಂತ್ರ್ಯ ಸೇನಾನಿಗಳನ್ನು ಸ್ಮರಿಸುವ ಕಾರ್ಯಕ್ರಮಗಳು ಹೆಚ್ಚಾಗಿ ನಡೆಯಬೇಕು' ಎಂದು ಆಶಿಸಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಅಧ್ಯಕ್ಷತೆ ವಹಿಸಿದ್ದರು.

ವಿದ್ಯಾರ್ಥಿಗಳು ಸಿದ್ಧಪಡಿಸಿದ, ಸ್ವಾತಂತ್ರ್ಯ ಹೋರಾಟಗಾರರು ಮತ್ತು ಚಳವಳಿಗಳನ್ನು ಬಿಂಬಿಸುವ ಭಿತ್ತಿಚಿತ್ರಗಳನ್ನು ಪ್ರದರ್ಶಿಸಲಾಯಿತು. ಫೋಟೊಗಳು, ಸ್ವಾತಂತ್ರ್ಯ ಸಂಗ್ರಾಮದ ಕೃತಿಗಳು, ಅಪರೂಪದ ನಾಣ್ಯಗಳು ಇದ್ದವು.

ವಿದ್ಯಾಸಂಸ್ಥೆಯ ಅಧ್ಯಕ್ಷ ಮುರಳೀಧರ ಭಾಗವತ್, ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್, ಗ್ರಂಥಪಾಲಕಿ ವೀಣಾ, ಕನ್ನಡ ವಿಭಾಗದ ಮುಖ್ಯಸ್ಥ ಎಚ್.ಆರ್.ತಿಮ್ಮೇಗೌಡ, ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಶ್ರೀಧರ ಎಚ್., ನಂದೀಶ್ ಎ.ಆರ್. ಪಾಲ್ಗೊಂಡಿದ್ದರು.



ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಗ್ರಂಥಾಲಯ ಅಧ್ಯಯನ ವಿಭಾಗದಲ್ಲಿ ಶುಕ್ರವಾರ ಆಯೋಜಿಸಿದ್ದ ಸ್ವಾತಂತ್ರ್ಯ ಹೋರಾಟಗಾರರ ಭಿತ್ತಿಚಿತ್ರಗಳು ಹಾಗೂ ಪುಸ್ತಕ ಪ್ರದರ್ಶನವನ್ನು ಅತಿಥಿಗಳು ವೀಕ್ಷಿಸಿದರು



Azadi Ka Amrit Mahotsav

## ಆಜಾದಿ ಕಾ ಅಮೃತ್ ಮಹೋತ್ಸವ – 15 ಆಗಸ್ಟ್, 2022

**ಮುಖ್ಯ ಅತಿಥಿಗಳಾಗಿ ಧ್ವಜಾರೋಹಣ ಮತ್ತು ಭಾಷಣ:**

**ಡಾ. ಶ್ರೀಧರ ಹೆಚ್, ಮುಖ್ಯಸ್ಥರು ಮತ್ತು ಇತಿಹಾಸ ಪ್ರಾಧ್ಯಾಪಕರು, ಮ.ಪ್ರ.ದ.ಕಾಲೇಜು**

**ಸ್ಥಳ: ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಮೈಸೂರು.**









# ಇತಿಹಾಸ ಪಠ್ಯಪುಸ್ತಕಗಳ ಬಿಡುಗಡೆ ಕಾರ್ಯಕ್ರಮ – 11.7.2022

Azadi Ka Amrit Mahotsav

**ಲೇಖಕರು: ಡಾ. ಶ್ರೀಧರ ಹೆಚ್, ಮುಖ್ಯಸ್ಥರು ಮತ್ತು ಇತಿಹಾಸ ಪ್ರಾಧ್ಯಾಪಕರು, ಮ.ಪ್ರ.ದ.ಕಾಲೇಜು**

**ಶೀರ್ಷಿಕೆ: ಪ್ರಾಚೀನ ಭಾರತದ ಇತಿಹಾಸ ಮತ್ತು ಆಧುನಿಕ ಭಾರತದ ಇತಿಹಾಸ**

**ಮುಖ್ಯ ಅತಿಥಿಗಳು: ಡಾ. ಕೆ. ಸದಾಶಿವ, ಅಧ್ಯಕ್ಷರು, ಮತ್ತು ಪ್ರಾಧ್ಯಾಪಕರು, ಇತಿಹಾಸ ಅಧ್ಯಯನ ವಿಭಾಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.**








## 'ಎನ್‌ಇಪಿ ಆಧರಿಸಿ ಡಾ.ಶ್ರೀಧರ್ ಪುಸ್ತಕ ರಚಿಸಿದ್ದಾರೆ'

### 'ಪ್ರಾಚೀನ ಭಾರತದ ಇತಿಹಾಸ', 'ಆಧುನಿಕ ಭಾರತದ ಇತಿಹಾಸ' ಪುಸ್ತಕಗಳ ಬಿಡುಗಡೆ



ಮೈಸೂರು: 2020ರ ರಾಷ್ಟ್ರೀಯ ಶಿಕ್ಷಣ ನೀತಿಗೆ ಸಂಬಂಧಿಸಿದ ಪಠ್ಯಕ್ರಮದ ಆಧಾರವಾಗಿ ಡಾ.ಶ್ರೀಧರ್ ಅವರು 'ಹಿಸ್ಟರಿ ಆಫ್ ಏನ್ಶಿಯಂಟ್ ಇಂಡಿಯಾ' ಮತ್ತು 'ಹಿಸ್ಟರಿ ಆಫ್ ಮಾಡರ್ನ್ ಇಂಡಿಯಾ' ಎಂಬ ಎರಡು ಕೃತಿಗಳನ್ನು ಉತ್ತಮ ರೀತಿಯಲ್ಲಿ ರಚನೆ ಮಾಡಿದ್ದಾರೆ. ಈ ಪುಸ್ತಕಗಳನ್ನು ಇತಿಹಾಸದ ವಿದ್ಯಾರ್ಥಿಗಳು ಓದಬೇಕು ಎಂದು ಇತಿಹಾಸ ವಿಭಾಗದ ಪ್ರಾಧ್ಯಾಪಕ ಡಾ.ಕೆ.ಸದಾಶಿವ ಅವರು ತಿಳಿಸಿದರು.

ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಸೋಮವಾರ ಸಂಜೆ ನಡೆದ ಶ್ರೀಧರ್ ಅವರ 'ಪ್ರಾಚೀನ ಭಾರತದ ಇತಿಹಾಸ' ,'ಆಧುನಿಕ ಭಾರತದ ಇತಿಹಾಸ' ಪುಸ್ತಕಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಇತ್ತೀಚೆಗೆ ಮೈಸೂರು ವಿವಿಗೆ ನ್ಯಾಕ್ ಕಮಿಟಿ ಭೇಟಿ ನೀಡಿದಾಗ ಕಡಿಮೆ ಅಂಕಗಳನ್ನು ನೀಡಿತು. ಅದನ್ನು ಅವಲೋಕನ ಮಾಡಿದಾಗ, ಬೇರೆ ವಿವಿಯವರು ಅಲ್ಲಿ ಪ್ರತಿ ಒಂದೂವರೆ ವರ್ಷಕ್ಕೆ ಪಠ್ಯ ಪರಿಷ್ಕರಣೆ ಮಾಡುತ್ತಾರೆ. ಹಾಗಾಗಿ ಅವುಗಳು ಉತ್ತಮ ಅಂಕಗಳನ್ನು ಪಡೆಯುವಲ್ಲಿ ಯಶಸ್ವಿಯಾಗಿವೆ ಎಂದು ತಿಳಿಸಿದರು.

ಪದವಿಯ ಪಠ್ಯ 31 ವರ್ಷಗಳಿಂದ ಪರಿಷ್ಕರಣೆಯಾಗಿರಲಿಲ್ಲ. ಪ್ರತಿ ಮೂರು ವರ್ಷಕ್ಕೆ ಪಠ್ಯ ಬದಲಾಗಬೇಕು ಎಂದು ನಿಯಮವಿದೆ. ಅದನ್ನು ಅನುಕರಣೆ ಮಾಡಬೇಕು. ಪಠ್ಯ ಬದಲಾವಣೆ ಎಂಬುದು ನ್ಯಾಕ್ ಸಮಿತಿಗೆ ಪ್ರಮುಖವಾಗುತ್ತವೆ. ನಾವು ಮೈವಿವಿಯಲ್ಲಿ ಇತಿಹಾಸದ ಪಠ್ಯ ಪರಿಷ್ಕರಣೆ ಮಾಡಿದಾಗ ಪ್ರಾಧ್ಯಾಪಕರೇ ವಿರೋಧ ಮಾಡಿದರು. ನಾನು ಡೆಮೋ ನೀಡಿದಾಗ ಎಲ್ಲ ಪ್ರಾಧ್ಯಾಪಕರೂ ಒಪ್ಪಿಕೊಂಡರು. ಕಾಲಕಾಲಕ್ಕೆ ಪ್ರಾಧ್ಯಾಪಕರು ಹೊಸ ನೀತಿಗಳನ್ನು ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಟಿ.ಮುರಳೀಧರ್ ಭಾಗವತ್, ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಪ್ರಾಂಶುಪಾಲರಾದ ಬಿ.ಆರ್.ಜಯಕುಮಾರಿ, ಕಾರ್ಯನಿರ್ವಣಾಧಿಕಾರಿ ಡಾ.ಎಸ್.ಆರ್. ರಮೇಶ್ ಮತ್ತಿತರರು ಹಾಜರಿದ್ದರು.



# International Yoga Day - 21.6.2022
## Student Volunteers of Mahajana Corps
## Activly participated & Rendered Voluntery Service in Historical International Yoga Day





ಶಿಕ್ಷಣದಿಂದ ಶ್ರೇಷ್ಠತೆ

**ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜು (ಸ್ವಾಯತ್ತ)**

ಜಯಲಕ್ಷ್ಮೀಪುರಂ, ಮೈಸೂರು–12

ಶ್ರೇಷ್ಠತೆಯ ಸಾಮರ್ಥ್ಯವುಳ್ಳ ಕಾಲೇಜು

**ಇತಿಹಾಸ ವಿಭಾಗ**

**Dept. of History**

**ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಯೋಜನೆಗೊಂಡು, ನ್ಯಾಕ್‌ನಿಂದ 'ಎ' ಮಾನ್ಯತೆ ಪಡೆದಿದೆ.**




ಸಂಚಿಕೆ: 35 ನವೆಂಬರ್ 2022 ಪ್ರಧಾನ ಸಂಪಾದಕರು: ಡಾ. ಬಿ.ಆರ್. ಜಯಕುಮಾರಿ, ಪ್ರಾಂಶುಪಾಲರು www.mahajana.edu.in ಸಂಪಾದಕರು: ಡಾ.ಶ್ರೀಧರ ಹೆಚ್, ಇತಿಹಾಸ ವಿಭಾಗ ಪುಟಗಳು: 09

**ಸಂಪಾದಕೀಯ**

# ವಿದೇಶದಲ್ಲಿ ಭಾರತೀಯ ಧ್ವಜ ಮೊದಲ ಬಾರಿ ಹಾರಿಸಿದ ವೀರ ಮಹಿಳೆ

ಮೇಡಂ ಭಿಕಾಜಿಕಾಮಾರವರ ಜನ್ಮ ದಿನ. ಭಾರತದ ಸ್ವಾತಂತ್ರ್ಯ ಸಂಗ್ರಾಮದ ಆರಂಭಿಕ ವರ್ಷಗಳಲ್ಲಿ ಪ್ರಮುಖ ಪಾತ್ರವಹಿಸಿದ ಈ ಅದಮ್ಯ ಮಹಿಳೆಯ ಆಕರ್ಷಕ ಕಥನ.

1907ರ ಆಗಸ್ಟ್ 21 ರಂದು ಜರ್ಮನಿಯ ಸ್ಟೆಟ್‌ಗಾರ್ಟ್ ಎಂಬ ನಗರದಲ್ಲಿ ಅಂತರರಾಷ್ಟ್ರೀಯ ಸಮಾಜವಾದಿ ಸಮಾವೇಶ ನಡೆಯುತ್ತಿತ್ತು. ಈ ಸಮ್ಮೇಳನದಲ್ಲಿ ಭಾಗವಹಿಸಲು ವಿಶ್ವದಾದ್ಯಂತ ಒಂದು ಸಾವಿರ ಪ್ರತಿನಿಧಿಗಳು ಸೇರಿದ್ದರು. ಆಗ ವೇದಿಕೆಯ ಮೇಲೆ ಭಾರತೀಯ ಉಡುಗೆಯಲ್ಲಿದ್ದ ಮಹಿಳೆಯೊರ್ವಳು, "ಇದು ಭಾರತದ ಸ್ವಾತಂತ್ರ್ಯ ಧ್ವಜ! ಇದಕ್ಕಾಗಿ ಪ್ರಾಣತ್ಯಾಗ ಮಾಡಿದ ಯುವ ಭಾರತೀಯರ ರಕ್ತದಿಂದ ಪವಿತ್ರವಾಗಿದೆ! ಈ ಬಾವುಟದ ಹೆಸರಿನಲ್ಲಿ ಈ ಹೋರಾಟವನ್ನು ಬೆಂಬಲಿಸುವಂತೆ ನಾನು ಪ್ರಪಂಚದಾದ್ಯಂತ ಸ್ವಾತಂತ್ರ್ಯ ಪ್ರಿಯರಿಗೆ ಮನವಿ ಮಾಡುತ್ತೇನೆ. ದಯವಿಟ್ಟು ಎದ್ದೇಳಿ! ಭಾರತದ ಈ ಸ್ವಾತಂತ್ರ್ಯ ಬಾವುಟಕ್ಕೆ ವಂದನೆ ಸಲ್ಲಿಸಿ!" ಎಂದು ನೂರಾರು ದೇಶಗಳ ಪ್ರತಿನಿಧಿಗಳಿಗೆ ಗಂಭೀರ್ವದ ಮೆಲುದನಿಯಲ್ಲಿ ವಿನಂತಿಸಿಕೊಂಡಳು.

ಈ ನಾಟ್ಕೀಯ ಘಟನೆಯಿಂದ ಆಶ್ಚರ್ಯಗೊಂಡ ಸಮ್ಮೇಳನದಲ್ಲಿದ್ದ ಪ್ರತಿನಿಧಿಗಳು ಎದ್ದು ನಿಂತು ಸ್ವತಂತ್ರ ಭಾರತದ ಮೊದಲ ಧ್ವಜಕ್ಕೆ ನಮಸ್ಕರಿಸಿದರು. ವಿದೇಶಿ ನೆಲದಲ್ಲಿ ಮೊದಲ ಬಾರಿ ವಂದಿಸಲ್ಪಟ್ಟ ಭಾರತೀಯ ಧ್ವಜವಾಗಿತ್ತು. ಹೀಗೆ ವಿದೇಶಿ ನೆಲದಲ್ಲಿ ಭ್ರತೀಯ ಧ್ವಜವನ್ನು ಎತ್ತಿ ಹಿಡಿದು ಅಲ್ಲಿ ಭಾರತೀಯರ ಕಷ್ಟಕಾರ್ಪಣ್ಯ ಹಾಗೂ ಬ್ರಿಟಿಷರ ದೌರ್ಜನ್ಯಗಳ ಕುರಿತು ದಿಟ್ಟವಾಗಿ ಅಂತರರಾಷ್ಟ್ರೀಯ ಸಮುದಾಯಕ್ಕೆ ಪರಿಚಯಿಸಿದ ಮಹಿಳೆಯೇ ಮೇಡಂ ಭಿಕಾಜಿಕಾಮಾ.

ಇದು ಸಾಧಾರಣ ಸಾಧನೆಯಾಗಿರಲಿಲ್ಲ. ಭಾರತದ ಸ್ವಾತಂತ್ರ್ಯ ಪ್ರಾಪ್ತಿಯ ನಲವತ್ತು ವರ್ಷಗಳ ಪೂರ್ವದ ಘಟನೆ ಇದಾಗಿತ್ತು.ಅದಾಗಲೇ ಭಾರತದಲ್ಲಿ ಹೊತ್ತಿ ಹೊಗೆಯಾಡುತ್ತಿದ್ದ ಸ್ವಾತಂತ್ರ್ಯ ಆಂದೋಲನದ ವಿಚಾರದ ಸ್ಪಷ್ಟವಾದಕಲ್ಪನೆ ಹೊರ ಜಗತ್ತಿಗೆ ಅಷ್ಟೇನು ಇರಲಿಲ್ಲ. ಬ್ರಿಟಿಷ್ ಸರ್ಕಾರ ವಿರುದ್ಧ ಹೋದ ಅದೆಷ್ಟೋ ಕ್ರಾಂತಿಕಾರಿಗಳನ್ನು ಬಂಧಿಸಿ ಕಾಲಾಪಾನಿ ಶಿಕ್ಷೆಯಂತಹ ದಮನಕಾರಿ ಕ್ರಮಗಳಿಂದ ಹತ್ತಿಕ್ಕುತ್ತಿರುವ ವಿಷಯ ಯುರೋಪಿಯನ್ನರಿಗೆ ತಲುಪಿಯೇ ಇರಲಿಲ್ಲ. ಇಂತಹ ಸಂದರ್ಭದಲ್ಲಿ ಅಂತರರಾಷ್ಟ್ರೀಯ ಸಮಾವೇಶದಲ್ಲಿ ಅದು ಹೇಗೋ ಪ್ರವೇಶ ದೊರಕಿಸಿಕೊಂಡ ಮ್ಯಾಡಂಕಾಮಾ, ಬ್ರಿಟಿಷ್ ವಸಾಹತು ಶಾಯಿಯ ಕರಾಳ ಮುಖದ ಪರಿಚಯವನ್ನು ಸಭೆಗೆ ಮಾಡಿಕೊಟ್ಟರು. ಜಗತ್ತಿಗೆ ಒಟ್ಟು ಜನಬಾಹುಳ್ಯದ ಐದರಲ್ಲಿ ಒಂದು ಭಾಗ ಸಾಮ್ರಾಜ್ಯದ ವಾದದ ದಾಸದಲ್ಲಿ ತೊಳಲಾಡುತ್ತಿರುವಾಗ ಸಮಾಜವಾದಕ್ಕೇನು ಅರ್ಥ? ಎಂದು ವಾದಿಸಿ ಹೊರಜಗತ್ತಿಗೆ ಭಾರತೀಯರ ಸಂಕಷ್ಟವನ್ನು ತಿಳಿಸಿಕೊಟ್ಟ ಧೀರೆ.

## ಮೇಡಂಕಾಮಾ ಹಾರಿಸಿದ ಧ್ವಜ

ಜರ್ಮನಿಯಲ್ಲಿ ಮೇಡಂಕಾಮಾ ಹಾರಿಸಿದ್ದ ಧ್ವಜದ ಬಣ್ಣ ಹಸಿರು, ಕೇಸರಿ ಹಾಗೂ ಕೆಂಪು ಬಣ್ಣದಲ್ಲಿತ್ತು. ಧೈರ್ಯದ ಸಂಕೇತ ಹಸಿರು, ವಿಜಯದ ಸಂಕೇತವಾಗಿ ಕೇಸರಿ ಹಾಗೂ ಶಕ್ತಿ ಸಂಕೇತವಾಗಿ ಕೆಂಪು ಬಣ್ಣದ ಧ್ವಜವನ್ನು ಕಾಮಾ ಹಿಡಿದಿದ್ದರು. 8 ರಾಜ್ಯಗಳ ಸಂಕೇತವಾಗಿ 8 ಕಮಲದ ಹೂವಿನ ಚಿತ್ರವಿತ್ತು. ದೇವನಾಗರಿ ಲಿಪಿಯಲ್ಲಿ ವಂದೇಮಾತರಂ ಬರೆಯಲಾಗಿತ್ತು.

ಅದೇ ಧ್ವಜವನ್ನು ನಂತರ ಸಮಾಜವಾದಿ ನಾಯಕ ಇಂದು ಲಾಲ್‌ಯಾಗ್ನಿಕ್ ಅವರು ಭಾರತಕ್ಕೆ ಕಳ್ಳಸಾಗಣೆ ಮಾಡಿದರು ಮತ್ತು ಈಗ ಪುಣೆಯ ಮರಾಠಾ ಮತ್ತು ಕೇಸರಿ ಗ್ರಂಥಾಲಯದಲ್ಲಿ ಪ್ರದರ್ಶನಕ್ಕಿಡಲಾಗಿದೆ.

## ಮೇಡಂ ಭಿಕಾಜಿಕಾಮಾ

1861ನೇ ಇಸವಿಯಲ್ಲಿ ಸೆಪ್ಟೆಂಬರ್ 24 ರಂದು ಮುಂಬೈನಲ್ಲಿ ಶ್ರೀಮಂತ ಫಾರಸಿ ಕುಟುಂಬದಲ್ಲಿ ಕಾಮಾ ಜನ್ಮವೆತ್ತಿದಳು. ತಂದೆ ಸೋರಾಬ್ಜಿ ಫ್ರಾಮಜಿ ಪಟೇಲ್‌ದೊಡ್ಡ ವ್ಯಾಪಾರಿಯಾಗಿದ್ದರು. ಮೇಡಂ ಕಾಮಾ ಚಿಕ್ಕಂದಿನಿಂದಲೂ ಅಪಾರ ದೇಶಾಭಿಮಾನಿ. ಶ್ರೀಮಂತ ನ್ಯಾಯವಾದಿಯಾಗಿದ್ದರು ಸ್ತುಂ ಕೆ.ಆರ್. ಕಾಮಾ

ಮು.ತಿ.ನೋ.



ಅವರೊಂದಿಗೆ ನಡೆದ ವಿವಾಹ ಬಹು ಕಾಲ ಬಾಳಲಿಲ್ಲ. ಕಾಮಾ ಕಟ್ಟಾ ಬ್ರಿಟಿಷ್ ಬೆಂಬಲಿಗರಾಗಿದ್ದರು. ಭಿಕಾಜಿ ಸಾಮ್ರಾಜ್ಯವಾದಿ ಬ್ರಿಟಿಷರ ಕಡು ವಿರೋಧಿ!

ಮುಂಬೈಯಲ್ಲಿ ಕಾಣಿಸಿಕೊಂಡ ಪ್ಲೇಗ್ ಪಿಡುಗಿನ ಕಾಲಕ್ಕೆ ಸ್ವಯಂ ಸೇವಕಿಯಾಗಿ ರೋಗಿಗಳ ಶುಶ್ರೂಷಾ ಪಥಕವನ್ನು ನಡೆಸಿದಳು. ಕೊನೆಗೆ ಸ್ವತಃ ರೋಗತಗಲಿ ಬದುಕುಳಿದರೂ ತುಂಬಾ ನಿಶ್ಯಕ್ತಳಾದ ಕಾರಣ ವೈದ್ಯರ ಸಲಹೆಯಂತೆ ಯುರೋಪಿಗೆ ತೆರಳಿದಳು. ಮುಂದೆ ಅದೇ ಅವಳ ಕರ್ಮಭೂಮಿ ಆಯಿತು. ಅಲ್ಲಿ ಗುಣಮುಖಳಾದ ಕಾಮಾ ಅಲ್ಲೇ ತನ್ನ ರಾಷ್ಟ್ರ ಜಾಗೃತಿಯ ಕಾರ್ಯಗಳನ್ನು ಆರಂಭಿಸಿದಳು.

ಲಂಡನ್ನಿನಲ್ಲಿ ಕೆಲಕಾಲ ದಾದಾಭಾಯಿ ನವರೋಜಿಯವರ ಕಾರ್ಯದರ್ಶಿಯಾಗಿದ್ದಳು. ಯುರೋಪಿಗೆ ಬರುತ್ತಿದ್ದ ಅನೇಕ ಭಾರತೀಯ ಕ್ರಾಂತಿಕಾರಿಗಳಿಗೆ ಅವಳ ಮನೆ ಆಶ್ರಯ ಸ್ಥಾನವಾಗಿತ್ತು. ಸ್ಟಟ್‌ಗಾರ್ಟ್ ಸಾಹಸದ ಬಳಿಕ ಕಾಮಾ, ಅಮೆರಿಕನ್‌ಯಾತ್ರೆ ಕೈಗೊಂಡಳು. ಅಮೆರಿಕನ್ನರಲ್ಲಿ ಭಾರತೀಯ ಸ್ವಾತಂತ್ರ್ಯ ಚಳುವಳಿಯ ಕುರಿತು ಜಾಗೃತಿ ಮೂಡಿಸುವ ಪ್ರಯತ್ನ ಮಾಡಿದಳು.

- ಭಾರತೀಯ ಅಂಚೆ ಇಲಾಖೆ 1962 ರಲ್ಲಿ ಮ್ಯಾಡಂ ಕಾಮಾ ಗೌರವಾರ್ಥವಾಗಿ ಸ್ಮರಣಾರ್ಥ ಅಂಚೆ ಚೀಟಿ ಬಿಡುಗಡೆ ಮಾಡಿದೆ.
- 1907ರಲ್ಲಿ ಭಾರತೀಯ ಕೋಸ್ಟ್‌ಗಾರ್ಡ್ ತನ್ನ ಗಸ್ತು ನೌಕೆಯೊಂದಕ್ಕೆ ಐಸಿಜಿಎಸ್ ಭಿಕಾಜಿ ಕಾಮ ಎಂದು ಹೆಸರಿಸಿದೆ.

ಲಂಡನ್ನಿಗೆ ಹಿಂತಿರುಗಿದ ಬಳಿಕ ದೇಶಭಕ್ತಿಗೆ ಮೀಸಲಾದ ಪುಸ್ತಕ ಪ್ರಕಟಣೆ ಕೈಗೊಂಡಳು. ಅನೇಕ ಕ್ರಾಂತಿಕಾರರಿಗೆ ಗುಪ್ತ ಧನಸಹಾಯ ಒದಗಿಸುತ್ತಿದ್ದಳು. ಬ್ರಿಟಿಷರು ಬಂಧಿಸಿ ಭಾರತಕ್ಕೆ ಅವಳನ್ನು ಸಾಗಿಸಲಿದ್ದಾರೆಂಬ ಸುಳಿವು ಸಿಕ್ಕೊಡನೆ ಪ್ಯಾರಿಸಿಗೆ ಹೋಗಿ ನೆಲೆಸಿದಳು. ಅಲ್ಲಿಯೂ ಹಲವು ಕ್ರಾಂತಿಕಾರಿಗಳು ಬಂದು ಸೇರಿದರು. ಎಲ್ಲರೂ ಸೇರಿ ವಂದೇ ಮಾತರ್ಂ ಎಂಬ್ ಪತ್ರಿಕೆ ಹೊರಡಿಸಿದರು.

ಮೇಡಂಕಮಾ ವಿದೇಶದಲ್ಲಿ ಇದ್ದರೂ ಭಾರತದ ಜನರ ಮೇಲೆ ಆಕೆಯ ಪ್ರಭಾವ ಕಡಿಮೆಯಾಗಿರಲಿಲ್ಲ. ಚೀನಾ, ಈಜಿಪ್ಟ್, ತುರ್ಕಿ ಮೊದಲಾದ ದೇಶಗಳಿಂದಲೂ ಕಾಮಾ ಮೆಚ್ಚುಗೆ ಪಡೆದಳು. ಕ್ರಾಂತಿಕಾರರಿಗೆ ಆಕೆಯೆಂದರೆ ಗೌರವವಿತ್ತು.

ಪ್ರಪಂಚದ ವಿವಿದೆಡೆಯ ಕ್ರಾಂತಿಕಾರಿಗಳಿಗೆಲ್ಲ ಮೇಡಂ ಕಾಮ ಪ್ರೀತಿಯ ತಾಯಿ, ನಲ್ಮೆಯ ಸೋದರಿಯಾಗಿದ್ದಳು. 1914 ರಲ್ಲಿ ಪ್ರಥಮ ಮಹಾಯುದ್ಧ ನಡೆದಾಗ ಮ್ಯಾಡಂ ಕಾಮಾ, ಬ್ರಿಟಿಷ್ ಸಮರ ನೀತಿಯನ್ನು ತೀವ್ರ ವಿರೋಧಿಸಿದಳು. ಯುದ್ಧದ ನಿಮಿತ್ತ ಅವ್ಯಾಹತವಾಗಿ ನಡೆಯುತ್ತಿದ್ದ ಭಾರತದ ಆರ್ಥಿಕ ಶೋಷಣೆಯನ್ನು ಪ್ರಬಲವಾಗಿ ಟೀಕಿಸಿದಳು. ಎರಡು ಸಾಮ್ರಾಜ್ಯಗಳ ಹಣಾಹಣಿಯಲ್ಲಿ ಬಡ ಭಾರತದ ಲೂಟಿ ಅವಳನ್ನು ತುಂಬ ಕಂಗೆಡಿಸಿತ್ತು.

ಅವಳಿಗೆ ಭಾರತಕ್ಕೆ ಬರಗೊಡದಂತೆ ಮಾಡುವುದರಲ್ಲಿ ಬ್ರಿಟಿಷರು ಯಶಸ್ವಿಯಾಗಿದ್ದರು. ಅವಳ ಕೆಚ್ಚೆದೆಯ ಹಾಗೂ ಕ್ರಾಂತಿಕಾರಿ ಧೋರಣೆಗಳು ಒಡ್ಡಬಹುದಾದ ಅಪಾಯದ ಅರಿವು ಅವರಿಗಿತ್ತು.

ಆದರೆ ಕಾಮಾ ಈಗ ಹಣ್ಣಾಗಿದ್ದಳು. ವಿದೇಶದಲ್ಲಿ ನಡೆದ ಮೂವತ್ತೈದು ವರ್ಷಗಳ ಹೋರಾಟ ಸಾಕಾಗಿತ್ತು. ಕೊನೆಯ ದಿನಗಳಲ್ಲಿ ತಾಯ್ನಾಡಿಗೆ ಬರಲು ನಿರ್ಧರಿಸಿದಳು.

ಕೊನೆಯ ಹಂತದಲ್ಲಿ ತನ್ನಾಸೆಯಂತೆ ಭಾರತಕ್ಕೆ ಮರಳಿ 1936ರ ಆಗಸ್ಟ್ 13 ರಂದು ಮೇಡಂ ಕಾಮಾ ತೀರಿಕೊಂಡಳು. 14 ವರ್ಷಗಳ ಕಾಲ ಭಾರತದಿಂದ ಹೊರಗಿದ್ದರೂ ಕಾಮಾ ಭಾರತವನ್ನೇ ಪ್ರೀತಿಸಿದವಳು. ಭಾರತದ ಸ್ವಾತಂತ್ರ್ಯಕ್ಕಾಗಿಯೇ ಹಗಲಿರುಳು ದುಡಿದಳು.

ತನ್ನರಕ್ತದ ಪ್ರತಿಕಣದಲ್ಲಿರುವ ಶಕ್ತಿಯನ್ನೂ ಭಾರತಾಂಬೆಗೆ ಮೀಸಲಿಟ್ಟಿದ್ದಳು. ಅಂತಹ ವೀರಮಾತೆಯು ಸ್ಮರಣೆ ಪಾವನವಾದುದು.

**– ಡಾ. ಶ್ರೀಧರ ಹೆಚ್.**
ಮುಖ್ಯಸ್ಥರು, ಇತಿಹಾಸ ವಿಭಾಗ

## Evaluation Work - 2021-22 (Even Semester)







## ಕದಂಬರ ಕಾಲದ ಕನ್ನಡ ಲಿಪಿ ವಿಕಾಸ

ಕರ್ನಾಟಕವನ್ನು ಆಳಿದ ಅತ್ಯಂತ ಪ್ರಾಚೀನವಾದ ಅಪ್ಪಟ ಕನ್ನಡ ರಾಜಮನೆತನವೆಂದು ಸುಪ್ರಸಿದ್ಧವಾಗಿರುವ ಕದಂಬ ವಂಶದ ಆಳ್ವಿಕೆಯ ಅವಧಿಯಲ್ಲಿ ಕ್ರಿ.ಶ.4–5ನೆಯ ಶತಮಾನದಲ್ಲಿ ಬಳಕೆಯಲ್ಲಿದ್ದ ಲಿಪಿಯನ್ನುಕದಂಬರ ಲಿಪಿ ಎಂದು ಕರೆಯಲಾಗುತ್ತದೆ. ಇದು ಕನ್ನಡ ಲಿಪಿಯ ಅತ್ಯಂತ ಪ್ರಾಚೀನವಾದ ಸ್ಥಿತಿಯೆಂದು ಬ್ಯೂಲರ್ ಅವರು ಅಭಿಪ್ರಾಯಪಟ್ಟಿದ್ದಾರೆ.

ಕದಂಬರ ಲಿಪಿಯಲ್ಲಿ ಕಂಡುಬರುವ ಪ್ರಮುಖವಾದ ಅಂಶವೆಂದರೆ ಅಕ್ಷರಗಳ ಮೇಲ್ಭಾಗದಲ್ಲಿ ಚೌಕಾಕಾರದ ಅಥವಾ ಪೆಟ್ಟಿಗೆಯ ಆಕಾರದ ತಲೆಕಟ್ಟು ಕದಂಬರ ಎಲ್ಲಾ ಶಾಸನಗಳ ಲಿಪಿಯ ಮೇಲ್ಭಾಗದಲ್ಲಿರುವ ತಲೆಕಟ್ಟಿನಲ್ಲಿ ಈ ರೀತಿಯ ಪೇಟಿಕಾ ಶಿರಸ್ಸು ಕಂಡುಬಂದಿದ್ದರೂ ಕ್ರಿ.ಶ. ಸುಮಾರು ಐದನೆಯ ಶತಮಾನದಲ್ಲಿ ರಚಿತವಾದ ಕದಂಬ ಅರಸರ ಶಾಸನಗಳಲ್ಲಿ ಮಾತ್ರಇಂತಹ ಪೇಟಿಕಾ ಶಿರಸ್ಸು ಇರುತ್ತದೆ. ಇದೇ ಕಾಲ ಘಟ್ಟದಲ್ಲಿ ರಚಿತವಾದ ಜನಸಾಮಾನ್ಯರ ಶಾಸನಗಳ ಲಿಪಿಗಳಲ್ಲಿ ಪೇಟಿಕಾ ಶಿರಸ್ಸು ಇರುತ್ತದೆ. ಇದೇ ಕಾಲಘಟ್ಟದಲ್ಲಿ ರಚಿತವಾದ ಇನ್ನೂ ಕೆಲವು ಜನಸಾಮಾನ್ಯರ ಶಾಸನಗಳ ಲಿಪಿಗಳಲ್ಲಿ ಪೇಟಿಕಾ ಶಿರಸ್ಸು ಇರುವುದಿಲ್ಲ.

ಕದಂಬ ದೊರೆಗಳ ಶಾಸನಗಳ ಲಿಪಿಯಲ್ಲಿ ಈ ರೀತಿಯ ಪೆಟ್ಟಿಗೆಯ ಆಕಾರದ ಅಥವಾ ಚೌಕಾಕಾರದ ಪೇಟಿಕಾ ಶಿರಸ್ಸು ರೂಪುಗೊಳ್ಳಲು ಕಾರಣವೇನೆಂದರೆ 'ಆದಿ ಕದಂಬರ ಸಮಕಾಲೀನರಾದ ಗುಪ್ತರು, ವಾಕಾಟಕರು ಹಾಗೂ ಭೋಜರ ಲಿಪಿಯ ಪ್ರಭಾವ ಕದಂಬರ ಲಿಪಿಯ ಮೇಲೆ ಆಗಿರುವುದರಿಂದ ಈ ರೀತಿಯ ಪೇಟಿಕಾ ಶಿರಸ್ಸು ಕದಂಬರ ಲಿಪಿಯಲ್ಲಿಯೂ ರೂಪುಗೊಂಡಿದೆ' ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಕದಂಬ ವಂಶದ ಶಾಂತಿವರ್ಮನ ತಾಳಗುಂದ ಸ್ತಂಭ ಶಾಸನ, ರವಿವರ್ಮನ ಗುಡ್ನಾಪುರ ಶಾಸನ, ಮೃಗೇಶವರ್ಮನ ಹಲಸಿ ತಾಮ್ರಶಾಸನ ಮುಂತಾದ ಶಾಸನಗಳಲ್ಲಿ ಈ ರೀತಿಯ ಪೇಟಿಕಾ ಶಿರಸ್ಸನ್ನು ನೋಡಬಹುದು.

ಕದಂಬ ದೊರೆ ಕೃಷ್ಣವರ್ಮನ ಕ್ರಿ.ಶ.420 ರಲ್ಲಿ ರಚಿತವಾದ ಹಾಸನ ಜಿಲ್ಲೆ, ಬೇಲೂರು ತಾಲ್ಲೂಕಿನ ಬನಹಳ್ಳಿ ತಾಮ್ರಶಾಸನದ ಲಿಪಿಯಲ್ಲಿ ಪೇಟಿಕಾ ಶಿರಸ್ಸು ಕಂಡುಬರುವುದಿಲ್ಲ. ಕದಂಬರಸ ಹರಿವರ್ಮನ ಕ್ರಿ.ಶ.538 ರಲ್ಲಿ ರಚಿತವಾದ ಬೆಳಗಾಂ ಜಿಲ್ಲೆಯ ಸಂಗೊಳ್ಳಿ ಶಾಸನದಲ್ಲಿಯೂ ಪೇಟಿಕಾ ಶಿರಸ್ಸು ಕಂಡುಬರುವುದಿಲ್ಲ. ಕದಂಬ ದೊರೆ ರವಿವರ್ಮನ ಕ್ರಿ.ಶ.6ನೇ ಶತಮಾನದ ಶಿರಸಿ ತಾಮ್ರಶಾಸನದಲ್ಲಿ ಹಾಗೂ ಕೃಷ್ಣವರ್ಮನ ಕಿರುಕುಪ್ಪಟೂರು ತಾಮ್ರಶಾಸನಗಳಲ್ಲಿ ಪೇಟಿಕಾ ಶಿರಸ್ಸು ಬಳಕೆಯಾಗಿದೆ. ಕದಂಬ ವಂಶದ ಸಂಸ್ಥಾಪಕನಾದ ಮಯೂರವರ್ಮನ ಚಂದ್ರವಳ್ಳಿ ಶಾಸನವು ಉಪಲಬ್ಧವಾಗಿರುವ ಅತ್ಯಂತ ಪ್ರಾಚೀನ ಕದಂಬ ಶಾಸನವಾಗಿದೆ. ಕ್ರಿ.ಶ. ಸುಮಾರು 325 ರಲ್ಲಿ ರಚಿತವಾಗಿರುವ ಚಂದ್ರವಳ್ಳಿ ಶಾಸನದಲ್ಲಿ ಪೇಟಿಕಾ ಶಿರಸ್ಸು ಕಂಡುಬರುವುದಿಲ್ಲ. ಕಾಕುಸ್ಥವರ್ಮನ ಹಲ್ಮಿಡಿ ಶಾಸನದಲ್ಲಿಯೂ ಪೇಟಿಕಾ ಶಿರಸ್ಸು ಕಂಡುಬರುವುದಿಲ್ಲವೆಂಬುದು ಗಮನಾರ್ಹ ಅಂಶ.

ಕದಂಬ ಅರಸರ ಶಾಸನಗಳನ್ನು ಹೊರತುಪಡಿಸಿ ಇದೇಕಾಲಘಟ್ಟದಲ್ಲಿಅಂದರೆ ಕ್ರಿ.ಶ.4–5ನೇ ಶತಮಾನದಲ್ಲಿ ರಚಿತವಾದ ಜನಸಾಮಾನ್ಯರ ಶಾಸನಗಳಲ್ಲಿ ಸಣ್ಣಗೆರೆಯಂತಹ ತಲೆಕಟ್ಟು ಕಂಡುಬರುತ್ತದೆ. ಕದಂಬರ ಲಿಪಿಯು ಶಾತವಾಹನರ ಬ್ರಾಹ್ಮೀ ಲಿಪಿಯ ಮತ್ತಷ್ಟು ವಿಕಾಸ ಹೊಂದಿದ ಸ್ವರೂಪದಲ್ಲಿದೆ ಎಂದು ಹೇಳಬಹುದು. ಶಾತವಾಹನರ ಬ್ರಾಹ್ಮೀಲಿಪಿಯ ಅಕ್ಷರಗಳು ಉದ್ದವಾಗಿದ್ದರೆ, ಕದಂಬರ ಲಿಪಿಯು ಸ್ವಲ್ಪಮಟ್ಟಿಗೆ ಚೌಕಾಕಾರದ ಲಕ್ಷಣವನ್ನು ಹೊಂದಿದ್ದು, ಗುಂಡನೆಯ ಆಕಾರವನ್ನು ಹೊಂದುವ ಪ್ರವೃತ್ತಿಯನ್ನು ತೋರುತ್ತಿರುವುದನ್ನು ಗಮನಿಸಬಹುದು. ಈ ಲಿಪಿಯಲ್ಲಿ ಮೊದಲ ಬಾರಿಗೆ ೞ, ಱ, ಲ ಮತ್ತು (ಃ) ವಿಸರ್ಗವನ್ನು ಕಾಣಬಹುದು.

ಕನ್ನಡ ಲಿಪಿಯ ವಿಕಾಸದ ಹಂತದಲ್ಲಿ ಕದಂಬರ ಲಿಪಿಯು ಅತ್ಯಂತ ಮಹತ್ವದ ಹಂತವೆಂದು ಹೇಳಬಹುದು. ಏಕೆಂದರೆ ಅಶೋಕನ ಕಾಲದ ಬ್ರಾಹ್ಮೀ ಲಿಪಿ ಮತ್ತು ಶಾತವಾಹನರ ಬ್ರಾಹ್ಮೀ ಲಿಪಿಯು ವಿಶೇಷವಾಗಿ ಪ್ರಾಕೃತ ಭಾಷೆಯನ್ನು ಬರೆಯುವುದಕ್ಕೋಸ್ಕರ ಬಳಸಲ್ಪಟ್ಟ ಲಿಪಿಗಳು. ಕದಂಬರ ಲಿಪಿ ಮೊದಲ ಬಾರಿಗೆ ಕನ್ನಡ ಭಾಷೆಯ ಶಾಸನಗಳನ್ನು ಬರೆಯಲು ಉಪಯೋಗಿಸಿದ ಲಿಪಿಯಾಗಿದೆ. ಆದ್ದರಿಂದ ಕನ್ನಡ ಭಾಷೆಯ ಜಾಯಮಾನಕ್ಕೆ ಒಗ್ಗುವ ಹಾಗೆ ಶಕಟರೇಫ (ಱ), ಲ ಹಾಗೂ ೞ ಮತ್ತು (ಃ) ವಿಸರ್ಗ ಅಕ್ಷರಗಳನ್ನು ಮೊದಲ ಬಾರಿಗೆ ಈ ಕಾಲಘಟ್ಟದಲ್ಲಿ ಸೃಷ್ಟಿಸಿಕೊಳ್ಳಲಾಯಿತು. ಅಕ್ಷರಗಳ ಉದ್ದವನ್ನು ಕುಗ್ಗಿಸಿ ಅಕ್ಷರಗಳ ಗಾತ್ರವನ್ನು ಹಿಗ್ಗಿಸಲಾಯಿತು. ಅಕ್ಷರಗಳು ಚೌಕಾಕಾರದ ಸ್ವರೂಪವನ್ನು ಪಡೆದುಕೊಂಡವು.

ಒಟ್ಟಾರೆ ಕದಂಬರ ಲಿಪಿಯು ಕನ್ನಡ ಲಿಪಿಯ ಅತ್ಯಂತ ಪ್ರಾಚೀನ ಸ್ವರೂಪವನ್ನು ದಾಖಲಿಸಿದೆ ಎಂದು ಹೆಳಬಹುದು. ಆದ್ದರಿಂದಲೇ ಬ್ಯೂಲರ್ ಅವರು ಕದಂಬ ಲಿಪಿಯು ಕನ್ನಡ ಲಿಪಿಯ ಅತ್ಯಂತ ಪ್ರಾಚೀನವಾದ ಸ್ಥಿತಿ ಎಂದು ಸರಿಯಾಗಿಯೇ ಅಭಿಪ್ರಾಯಪಟ್ಟಿದ್ದಾರೆ.

**– ಕುಶಾಲಪ್ಪ**
ಅಂತಿಮ ಬಿ.ಎ. ವಿದ್ಯಾರ್ಥಿ



# Implementation of NEP - 2020
## Departments of History, Geography & IQAC - 29.9.2022











# Departments of History, Journalism & Mass Communication Heritage Club & VOMC Participated in Dasara Heritage walk, Mysuru 1.10.2022














**Departments of History, Journalism & Mass Communication Heritage Club & VOMC Participated in Dasara Heritage walk, Mysuru 1.10.2022**








# Visit to Exhibition of Conservation of Heritage Monuments

**Place : Dept. of Archeaology, Museum & Heritage, Mysuru     Date : 12.10.2022**



















Release of 'Kadamba' Newsletter - Sanchike 34



**Sepcial Lecture and Intaractive Session**
**Dr. Madhavi M K, Associate Professor, Dept. of History,**
**Government First Grade College, T. Narashipura**
**Topic: Introduction to Ancient World Civilizations - 9.11.2022**



